| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3<br>EVS-18 | 10 ನಿ | ಪರಿಸರ ಅಧ್ಯಯನ<br>ನಮ್ಮ ಸುತ್ತಮುತ್ತ | ಸ್ಥಳೀಯ ಭೌಗೋಳಿಕ ಲಕ್ಷಣಗಳನ್ನು ಗುರುತಿಸುವುದು | ಬಣ್ಣದ ಪೆನ್ಸಿಲ್ ನೋಟ್ ಪುಸ್ತಕ | ಶಿಕ್ಷಕ | ಶಿಕ್ಷಕರು ಎಲ್ಲಾ ವಿದ್ಯಾರ್ಥಿಗಳು ತಮ್ಮ ನೋಟ್ ಪುಸ್ತಕದಲ್ಲಿ ನದಿ / ಕಾಡು / ಬೆಟ್ಟ ಇವುಗಳಲ್ಲಿ ಯಾವುದಾದರೊಂದು ಸುಂದರ ಚಿತ್ರ ಬರೆಯಲು ಸೂಚಿಸುವರು. | ಪರಿಸರ ಅಧ್ಯಯನ<br>ನಮ್ಮ ಸುತ್ತ ಮುತ್ತ | ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ಅರ್ಥೈಸಿಕೊಂಡು ಭೌಗೋಳಿಕ ಲಕ್ಷಣಗಳ ಬಗ್ಗೆ ಮಾಹಿತಿ ಪಡೆಯುವದು. | ಹಳೆಯ ದಿನ ಪತ್ರಿಕೆಗಳು, ಪಠ್ಯಪುಸ್ತಕ | ಶಿಕ್ಷಕ | ಪಠ್ಯಪುಸ್ತಕ ಪುಟಸಂಖ್ಯೆ 19ನ್ನು ಓದಿಸಲು ಮಕ್ಕಳಿಗೆ ಅಗತ್ಯ ಸೂಚನೆ ನೀಡುವರು. |
| | 30 ನಿ | | | | ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು | | | | ಶಿಕ್ಷಕ | ಶಿಕ್ಷಕರು ವೈಯಕ್ತಿಕವಾಗಿ ಮಕ್ಕಳಿಗೆ ಪಾಠವನ್ನು ಓದಲು ತಿಳಿಸಿ ಉಳಿದ ಮಕ್ಕಳು ಪಾಠ ಗಮನಿಸಲು ಸೂಚಿಸುವರು. ತಪ್ಪುಗಳನ್ನು ಮಕ್ಕಳಿಂದಲೇ ತಿದ್ದಿಸಿ ಅಗತ್ಯ ಮಾರ್ಗದರ್ಶನ ಮಾಡುವರು. |
| | 10 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡುವರು.<br>ಮುಂದಿನ ಚಟುವಟಿಕೆಗೆ ಮಕ್ಕಳು ವೃತ್ತಾಕಾರ ಮಕ್ಕಳು ವೃತ್ತಾಕಾರವಾಗಿ ಕೂರಲು ತಿಳಿಸುವರು. | | | | ಶಿಕ್ಷಕ | ಹಳೆಯ ಪಠ್ಯ ಪುಸ್ತಕ / ದಿನಪತ್ರಿಕೆ / ವೃತ್ತ ಪತ್ರಿಕೆ ನೀಡಿ ಅವುಗಳಲ್ಲಿರುವ ಬೆಟ್ಟ / ಕೆರೆ, ಸಮುದ್ರ, ನದಿ, ಝರಿ, ಜಲಪಾತ, ಕಾಡು ಇವುಗಳ ಚಿತ್ರ ಸಂಗ್ರಹಿಸಲು ಸೂಚಿಸುವರು. (ಕನಿಷ್ಠ – 4) |
| | 30 ನಿ | | | ಪಠ್ಯಪುಸ್ತಕ ಬಣ್ಣಗಳು / ಬಣ್ಣದ ಸ್ಕೆಚ್ ಪೆನ್ನುಗಳು | ಶಿಕ್ಷಕರು | **ಪುನರ್ಬಲನ ಚಟುವಟಿಕೆ :**<br>ಪಠ್ಯ ಪುಸ್ತಕ ಪುಟ 21ರ ಚೌಕಟ್ಟು (ತಿಳಿ–ಕಲಿ–3) ಸ್ಥಳದಲ್ಲಿ ಮಗು ನೋಟ್ ಪುಸ್ತಕದಲ್ಲಿ ಸುಂದರವಾಗಿ ಬರೆದ ಚಿತ್ರವನ್ನು ಪುನಃ ಬರೆದು ಬಣ್ಣ ಹಾಕಲು ಸೂಚಿಸುವರು. ಎಲ್ಲಾ ಮಕ್ಕಳಿಂದ ಈ ಚಟುವಟಿಕೆಯುನ್ನು ವೈಯುಕ್ತಿಕ ಮಾರ್ಗದರ್ಶನದಲ್ಲಿ ಮಾಡಿಸುವರು. | | | | ಹಿರೇಮಣಿ | **ಗುಂಪು ಚಟುವಟಿಕೆ :** ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |

ಎರಡೂ ತರಗತಿಗಳ ಚಟುವಟಿಕೆಯನ್ನು ಪರಿಶೀಲಿಸಿದ ನಂತರ ಅವಧಿ ಮುಕ್ತಾಯಗೊಳ್ಳುವುದು.

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 | 20 ನಿ | ಸಾ.ಉ.ಉ. ಕಾರ್ಯ<br>“ಪಕ್ಷಿಗಳ ಚಿತ್ರಗಳ ಆಲ್ಬಮ್ ತಯಾರಿಕೆ ಕಾರ್ಯ” | * ಆಲ್ಬಮ್ ತಯಾರಿಕೆಯ ವಿಧಾನ ಹಾಗೂ ಹಂತಗಳನ್ನು ಅರಿಯುವರು. | ¼ size Drawing Sheet<br>ಅಂಟು, ಪಕ್ಷಿಗಳ ಚಿತ್ರಗಳು. | ಶಿಕ್ಷಕ | ಎರಡೂ ತರಗತಿಯ ಮಕ್ಕಳನ್ನು ಅವರ ಸಂಖ್ಯೆಗಳಿಗೆ ಅನುಗುಣವಾಗಿ ಕೂರಿಸುವುದು. ನಂತರ ಅವರಿಗೆ ಗುಂಪಿಗೆ 2–3 ರಂತೆ ¼ size ಡ್ರಾಯಿಂಗ್ ಹಾಳೆಗಳನ್ನು ಹಾಗೂ ಚಿಕ್ಕ ಬಟ್ಟಲುಗಳಲ್ಲಿ ಗೋಂದು ವಿತರಿಸುವರು.<br>ನಂತರ ಮಕ್ಕಳಿಂದ ತಮಗೆ ಪರಿಚಿತವಾಗಿ ಅಥವಾ ತಾವು ನೋಡಿರುವ ಪಕ್ಷಿಗಳನ್ನು ಹೆಸರಿಸುವಂತೆ ಸೂಚಿಸುವುದು ಶಿಕ್ಷಕರು ಹೆಸರುಗಳನ್ನು ಕಪ್ಪು ಹಲಗೆಯ ಮೇಲೆ ಬರೆಯುವರು. | ಎರಡೂ ತರಗತಿಯ ಸಾಮರ್ಥ್ಯಗಳು ಒಂದೇ ಆಗಿರುವುದರಿಂದ ಎರಡೂ ತರಗತಿಯ ವಿದ್ಯಾರ್ಥಿಗಳು ಒಟ್ಟಿಗೆ ಚಟುವಟಿಕೆಯಲ್ಲಿ ತೊಡಗುವರು. | | | | |
| | 40 ನಿ | | | ವೃತ್ತ ಪತ್ರಿಕೆಗಳು, ಪಕ್ಷಿಗಳ ಚಿತ್ರಗಳು, ಕತ್ತರಿ, ಅಂಟು. | ಶಿಕ್ಷಕ | ಶಿಕ್ಷಕರ ಸೂಚನೆಯಂತೆ ಮಕ್ಕಳು ವೃತ್ತಪತ್ರಿಕೆಗಳಲ್ಲಿ ಪ್ರಕಟವಾದ ಹಕ್ಕಿಗಳ ಚಿತ್ರಗಳನ್ನು ಸಂಗ್ರಹಿಸಿ ಅವುಗಳ ಆಕಾರಕ್ಕೆ ಅನುಗುಣವಾಗಿ ಕತ್ತರಿಸಿ, ಅಗತ್ಯ ಸೂಚನೆಗಳನ್ನು ನೀಡುತ್ತಾ [ಎಲ್ಲಿ ಅಂಟಿಸಬೇಕು, ಹೆಸರು ಬರೆಯಲು ಎಷ್ಟು ಸ್ಥಳ ಬಿಡಬೇಕು. ಇತ್ಯಾದಿ] ಚಿತ್ರಗಳನ್ನು ಡ್ರಾಯಿಂಗ್ ಹಾಳೆಗೆ ಅಂಟಿಸುವಂತೆ ಮಾರ್ಗದರ್ಶನ ನೀಡುವರು.<br>ಮಕ್ಕಳು ಸೂಚನೆಗಳನ್ನು ಅನುಸರಿಸುತ್ತಾ ಪಕ್ಷಿಗಳ ಚಿತ್ರಗಳನ್ನು ಡ್ರಾಯಿಂಗ್ ಹಾಳೆಗೆ ಅಂಟಿಸುವರು.<br>ಪ್ರತಿ ಗುಂಪಿನ ಚಟುವಟಿಕೆಯನ್ನು ಶಿಕ್ಷಕರು ಗಮನಿಸುತ್ತಿರುವರು. | | | | | |
| | 20 ನಿ | | | | ಶಿಕ್ಷಕ | ಮಕ್ಕಳು ಚಿತ್ರ ಅಂಟಿಸಿದ ಡ್ರಾಯಿಂಗ್ ಹಾಳೆಗಳನ್ನು ಪರಿಶೀಲಿಸಿ, ಅಗತ್ಯ ತಿದ್ದುಪಡಿ ಮಾಡಿ, ಅವಶ್ಯಕವಿದ್ದರೆ, ಹೊಸ ಕಾರ್ಡ್ ನೀಡಿ ಚಿತ್ರ ಅಂಟಿಸುವಂತೆ ಸೂಚಿಸುವರು.<br>ಕೊನೆಯಲ್ಲಿ ಚಿತ್ರಗಳನ್ನು ಅಂಟಿಸಿ ಪೂರ್ಣಗೊಂಡಿರುವ ಕಾರ್ಡ್‌ಗಳನ್ನು ಸಂಗ್ರಹಿಸಿ ಸುರಕ್ಷಿತವಾಗಿ ಸಂರಕ್ಷಿಸುವರು.<br>[ಮುಂದಿನ S.U.P.W. ಅವಧಿಗೆ ಮುಂದುವರಿದಿದೆ] | | | | | |

“ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು”.

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>Kan-30 | 35 ನಿ | ಕನ್ನಡ<br>ಪದ ಓದು, ಅಕ್ಷರ ಕಲಿ– ಹಂತ –1 | * ವರ್ಣಮಾಲೆಯ ಕನ್ನಡ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವುದು (ರ, ಗ, ಸ, ದ, ಅ) | ಅಕ್ಷರಗಳ ಮಿಂಚು ಪಟ್ಟಿಗಳು<br><br>ವಾಲ್ ಸ್ಲೇಟ್ | ಶಿಕ್ಷಕ | ಹಂತ–Iರ ಪದಗಳನ್ನು ಹೇಳಿಕೊಟ್ಟು ಹೇಳಿಸುವರು. ಗುಂಪಿನಲ್ಲಿ ಹಾಗೂ ವೈಯಕ್ತಿಕವಾಗಿ ಓದಿಸುವರು / ಹೇಳಿಸುವರು.<br>* ರ, ಗ, ಸ, ದ, ಅ, ಅಕ್ಷರಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಹಾಗೂ ಒಂದೊಂದೇ ಅಕ್ಷರದ ಮಿಂಚುಪಟ್ಟಿ ಬಳಸಿ ಅಕ್ಷರಗಳನ್ನು ಪ್ರತಿ ವಿದ್ಯಾರ್ಥಿಯಿಂದ ಹೇಳಿಸುವರು.<br>'ರ' ಅಕ್ಷರವನ್ನು ಬರೆಯುವ ಕ್ರಮವನ್ನು ಹೇಳಿಕೊಟ್ಟು ಬರೆಸುವರು.<br>ವಾಲ್‌ಸ್ಲೇಟ್‌ನಲ್ಲಿ ಅಕ್ಷರ ಹೇಳಿಕೊಂಡು ಬರೆಯಲು ಸೂಚಿಸುವರು. | ಕನ್ನಡ<br>ಲಚ್ಚಿಯ ಮೆಚ್ಚಿನ ದೋಣಿ | ಸಂಯುಕ್ತಾಕ್ಷರಗಳು ಪದಗಳನ್ನು ಗುರುತಿಸಿ ಉಚ್ಚರಿಸುವುದು ಮತ್ತು ನಕಲು ಮಾಡುವುದು | ಪಠ್ಯ ಪುಸ್ತಕ | ಸ್ವಕಲಿಕೆ / ಹಿರೇಮಣಿ | ಪುಟಸಂಖ್ಯೆ 20ರ ಎರಡೂ ವಾಕ್ಯಗಳನ್ನು ಅಭ್ಯಾಸದ ಹಾಳೆಯಲ್ಲಿ ನಕಲು ಮಾಡುವರು. |
| | 35 ನಿ | | | | ಸ್ವಕಲಿಕೆ | ಮೇಲೆ ಹೇಳಲಾದ ಚಟುವಟಿಕೆಯಲ್ಲಿ ತೊಡಗಿರುವರು. | | | ಪಠ್ಯ ಪುಸ್ತಕ | ಶಿಕ್ಷಕ | ಮೇಲೆ ಹೇಳಲಾದ ವಾಕ್ಯಗಳನ್ನು ವಿದ್ಯಾರ್ಥಿಗಳು ನಕಲು ಮಾಡಿರುವುದನ್ನು ಪರಿಶೀಲಿಸುವರು ತಪ್ಪುಗಳನ್ನು ಸರಿಪಡಿಸುವರು. ಪಠ್ಯಪುಸ್ತಕ 23ರ ಭಾಷಾಭ್ಯಾಸದಲ್ಲಿನ 'ಅ' ವಿಭಾಗದ ವಾಕ್ಯಗಳ ಹಾಗೂ ಇದೇ ರೀತಿ ವಾಕ್ಯಗಳ ಮಿಂಚುಪಟ್ಟಿಗಳನ್ನು ಮಕ್ಕಳಿಂದ ಓದಿಸುವರು. |
| | 10 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ಸರಿಯಾಗಿ ಬರೆಯಲು ಬಾರದ ಮಕ್ಕಳನ್ನು ಗುರುತಿಸಿ ಮತ್ತೊಮ್ಮೆ ಸರಿಯಾಗಿ ಅಭ್ಯಾಸ ಮಾಡಿಸುವರು. | | | | | ಮೇಲೆ ಬಳಸಲಾದ ಮಿಂಚುಪಟ್ಟಿಗಳನ್ನು ನೀಡಿ ಓದಲು ತಿಳಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 | 20 ನಿ | ಜೀವನ ವಿಜ್ಞಾನ<br>“ನಾಯಿ ಮತ್ತು ಮೂಳೆ ಆಟ” | * ನಿಯಮಗಳನ್ನು ಅನುಸರಿಸಿ ಆಟ ಆಡಲು ಅಭ್ಯಾಸ ಮಾಡುವರು. | ಕರವಸ್ತ್ರ ಅಥವ ಅಗತ್ಯ ಬಟ್ಟೆ | ಶಿಕ್ಷಕ | ಮೊದಲಿಗೆ ಶಿಕ್ಷಕರು, ಮಕ್ಕಳು ಸಾಲು ಮಾಡಿಸಿ, ಆಟದ ಮೈದಾನಕ್ಕೆ ಕರೆದೊಯ್ಯುವರು, ಹಾಗೂ ಆಟದ ಮೈದಾನವನ್ನು 1 ಅಥವಾ 2 ಸುತ್ತು ಸುತ್ತುವಂತೆ ತಿಳಿಸುವರು. ನಂತರ ಅವರನ್ನು ಒಂದು ದೊಡ್ಡ ವೃತ್ತ ಮಾಡಿ ನಿಲ್ಲುವಂತೆ ಹೇಳುವರು. | | | | | ಎರಡೂ ತರಗತಿಯ ಮಕ್ಕಳು ಒಟ್ಟುಗೂಡಿ ನಿಯಮವನ್ನುಸರಿಸಿ ಆಟ ಆಡುವರು. |
| | 50 ನಿ | | | | ಶಿಕ್ಷಕ | ಶಿಕ್ಷಕರು ಮಕ್ಕಳನ್ನು ಎರಡು ಸಾಲುಗಳಲ್ಲಿ ನಿಲ್ಲಿಸಿ, ಅವರಿಗೆ, ‘ನಾಯಿ ಮತ್ತು ಮೂಳೆ’ ಆಟದ ನಿಯಮಗಳನ್ನು ವಿವರವಾಗಿ ಪರಿಚಯಿಸಿ ಆಟ ಆಡಿಸುವರು.<br>ಮಕ್ಕಳು ನಿಯಮವನ್ನನುಸರಿಸಿ, ಆಟ ಆಡುವರು. ಆಟದ ವಿಧಾನವನ್ನು ಮಕ್ಕಳು ಅರಿಯುವರು. | | | | | |
| | 10 ನಿ | | | | ಶಿಕ್ಷಕ | ಕೊನೆಯಲ್ಲಿ ಶಿಕ್ಷಕರು, ಮಕ್ಕಳನ್ನು ಒಂದೇ ಸಾಲು ಮಾಡಿಸಿ, ತರಗತಿಗೆ ಕರೆದೊಯ್ಯುವರು ಹಾಗೂ ಮುಂದಿನ ತರಗತಿಗೆ ಸಿದ್ಧತೆ ಮಾಡಿಕೊಳ್ಳುವರು. | | | | | |

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 EVS-19 | 10 ನಿ | ಪರಿಸರ ಅಧ್ಯಯನ ನಮ್ಮ ಸುತ್ತಮುತ್ತ | ಸ್ಥಳೀಯ ಭೌಗೋಳಿಕ ಲಕ್ಷಣಗಳನ್ನು ಗುರುತಿಸುವದು | ಪ್ರಕೃತಿಯ ಚಿತ್ರ ಪಟ | ಶಿಕ್ಷಕ | ಕೆಲವು ಚಿತ್ರ ಪಟಗಳನ್ನು ಕೊಟ್ಟು ಅವುಗಳನ್ನು ಹೆಸರಿಸಲು ವಿದ್ಯಾರ್ಥಿಗಳಿಗೆ ಸೂಚಿಸಿ ಹಿರೇಮಣಿ ಈ ಕಾರ್ಯನಿರ್ವಹಿಸಲು ಸೂಚಿಸುವರು. | ಪರಿಸರ ಅಧ್ಯಯನ ನಮ್ಮ ಸುತ್ತ ಮುತ್ತ | ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ಅರ್ಥೈಸಿಕೊಂಡು ಭೌಗೋಳಿಕ ಲಕ್ಷಣಗಳ ಬಗ್ಗೆ ಮಾಹಿತಿ ಪಡೆಯುವದು | ಪಠ್ಯಪುಸ್ತಕ ಸಂಗ್ರಹಿಸಿದ ಚಿತ್ರಗಳು ಅಂಟು ಇತ್ಯಾದಿ | ಶಿಕ್ಷಕ | ಪಠ್ಯಪುಸ್ತಕ ಪುಟಸಂಖ್ಯೆ 20ರ ತಿಳಿ–ಕಲಿ ಅಂಕಣ ಭರ್ತಿ ಮಾಡಿಸಲು ಹಿಂದಿನ ತರಗತಿಯಲ್ಲಿ ಸಂಗ್ರಹಿಸಿದ್ದ ಚಿತ್ರಗಳು ಹಾಗೂ ಅಗತ್ಯ ಸಾಮಗ್ರಿಗಳೊಂದಿಗೆ ಸಿದ್ಧರಾಗುವರು. ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸುವರು. |
| | 30 ನಿ | | | | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕರು | ಪಠ್ಯಪುಸ್ತಕ ಪುಟಸಂಖ್ಯೆ 20ರ ಚಟುವಟಿಕೆಯನ್ನು ಅಗತ್ಯ ಮಾರ್ಗದರ್ಶನದಲ್ಲಿ ಪ್ರತಿ ವಿದ್ಯಾರ್ಥಿಯಿಂದ ಮಾಡಿಸುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪೂರೈಸಿದ ಬಗ್ಗೆ ಪರಿಶೀಲಿಸುವರು. | | | | ಶಿಕ್ಷಕ | ತಮ್ಮ ಶಾಲೆಯನ್ನು ಗುರುತಿನಿಂದ ಹಾಳೆಯ ಮಧ್ಯದಲ್ಲಿ ಗುರುತಿಸಿಕೊಂಡು ಅದಕ್ಕೆ ಹತ್ತಿರದಲ್ಲಿರುವ / ಸುತ್ತಮುತ್ತ ಇರುವ ಹಳ್ಳ, ಬೆಟ್ಟ, ನದಿ, ಸೇತುವೆ, ಭಾವಿ, ಮೊದಲಾದವನ್ನು ಅಂದಾಜಿನ ಮೇಲೆ ಗುರುತಿಸಿ ಸ್ಥಳೀಯ ನಕ್ಷೆ ರಚಿಸಲು ಸೂಚಿಸುವರು. |
| | 30 ನಿ | | | | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :**<br>* ಮಕ್ಕಳಿಂದ ಅವರ ಪರಿಸರದಲ್ಲಿನ ಸುಂದರ ಸ್ಥಳ, ಮಗು ಮೆಚ್ಚಿಕೊಂಡ ಸುಂದರ ಸ್ಥಳ, ಯಾಕೆ ಅದು ಇಷ್ಟ ? ಎಂಬ ಬಗ್ಗೆ ಪ್ರಶ್ನಿಸಿ ಉತ್ತರ ಪಡೆಯುವರು.<br>* ಮಕ್ಕಳನ್ನು ಪ್ರಶ್ನಿಸಿ ಉತ್ತರ ಪಡೆಯುತ್ತಾ ಕಪ್ಪು ಹಲಗೆಯ ಮೇಲೆ ಶಾಲಾ ಪರಿಸರದ (ಭೌಗೋಳಿಕ) ನಕ್ಷೆ ಬಿಡಿಸುವರು.<br>**ಸೂಚನೆ :** ಮೇಲಿನ ಚಟುವಟಿಕೆಯನ್ನು ಎರಡೂ ತರಗತಿಯ ಮಕ್ಕಳಿಗೆ ಒಟ್ಟಾಗಿ ಮಾಡಿಸಿ ನಂತರ ಹೆಚ್ಚಿನ ಅಭ್ಯಾಸಕ್ಕೆ 2ನೇ ತರಗತಿಯಲ್ಲಿ ಸೂಚಿಸಿದ ಚಟುವಟಿಕೆ ನೀಡಬಹುದು. | | | ಶಾಲೆಯ ಪರಿಸರ | ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | | ಎರಡೂ ತರಗತಿಗಳ ಚಟುವಟಿಕೆ ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ಮಾಡುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | [illegible] | [illegible] | [illegible] | [illegible] | [illegible] | ಕಲಿಕಾ ಪ್ರಕ್ರಿಯೆ | [illegible] | [illegible] | [illegible] | [illegible] | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 | 20 ನಿ | ಸಾ. ಕ. ಆ. ಕಾರ್ಯ "ಪಕ್ಷಿಗಳ ಚಿತ್ರಗಳ ಆಲ್ಬಮ್ ತಯಾರಿಕೆ (ಮುಂದುವರಿದುದು) | * ಆಲ್ಬಮ್ ತಯಾರಿಕೆಯ ವಿಧಾನ ಹಾಗೂ ಹಂತಗಳನ್ನು ಅರಿಯುವರು. | ಸ್ಕೇಲ್, ಸ್ಕೆಚ್‌ಪೆನ್ನುಗಳು, ಪೆನ್ಸಿಲ್, ದಾರ, ಸೂಜಿ | ಶಿಕ್ಷಕರು | ಮೊದಲಿಗೆ ಶಿಕ್ಷಕರು ಮಕ್ಕಳನ್ನು ಹಿಂದಿನ ಅವಧಿಯಲ್ಲಿ ಗುಂಪು ಮಾಡಿದಂತೆ ಗುಂಪು ಮಾಡಿ ಕುಳಿತುಕೊಳ್ಳುವಂತೆ ಸೂಚನೆ ನೀಡುವರು.<br>ಮಕ್ಕಳು ಗುಂಪಿನಲ್ಲಿ ಕುಳಿತ ನಂತರ ತಾವು ಹಿಂದಿನ ಅವಧಿಯಲ್ಲಿ ಪಕ್ಷಿಗಳ ಚಿತ್ರ ಅಂಟಿಸಿಟ್ಟಿದ್ದ ಡ್ರಾಯಿಂಗ್ ಹಾಳೆಗಳನ್ನು ಅವರಿಗೆ ವಿತರಿಸಿ, ತಾವು ಅಂಟಿಸಿರುವ ಪಕ್ಷಿಗಳ ಹೆಸರುಗಳನ್ನು ಗಟ್ಟಿಯಾಗಿ ಹೇಳುವಂತೆ ಸೂಚಿಸುವರು. ಶಿಕ್ಷಕರು ಆ ಹೆಸರುಗಳನ್ನು ಕಪ್ಪು ಹಲಗೆಯ ಮೇಲೆ ಬರೆಯುವರು. ನಂತರ ಮಕ್ಕಳಿಗೆ ಸ್ಕೇಲ್ ಹಾಗೂ ಸ್ಕೆಚ್ ಪೆನ್ನುಗಳನ್ನು ವಿತರಿಸುವರು. | | | | | 1ನೇ ತರಗತಿಯ ಮಕ್ಕಳೊಂದಿಗೆ ಸೇರಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 40 ನಿ | | | | ಶಿಕ್ಷಕರು | ಶಿಕ್ಷಕರು ಮಕ್ಕಳು ಪಕ್ಷಿಗಳ ಚಿತ್ರ ಅಂಟಿಸಿರುವ ಕಾರ್ಡ್‌ಗಳಲ್ಲಿ ಎಲ್ಲಿ ಹೇಗೆ, ಗೆರೆ ಎಳೆಯಬೇಕೆಂಬುದನ್ನು ಪ್ರತಿ ಗುಂಪಿಗೆ ನಿರ್ದಿಷ್ಟವಾಗಿ ತಿಳಿಸಿ, ಅವಶ್ಯಕವಿದ್ದಲ್ಲಿ ಪೆನ್ಸಿಲ್‌ನಿಂದ ಗುರುತು ಹಾಕಿ ಕೊಡುವರು.<br>ಮಕ್ಕಳು ಶಿಕ್ಷಕರ ಸೂಚನೆಯನ್ನು ಅನುಸರಿಸಿ ಅಂಚುಗಳಲ್ಲಿ ಚೌಕಟ್ಟು ಗೆರೆ ಎಳೆಯುವರು.<br>ಶಿಕ್ಷಕರು 2ನೇ ತರಗತಿಯ ಮಕ್ಕಳಿಂದ ಪಕ್ಷಿಗಳ ಚಿತ್ರಗಳ ಕೆಳಗೆ ಅವುಗಳ ಹೆಸರುಗಳನ್ನು ಅಂದವಾಗಿ ಬರೆಯಿಸುವರು. | | | | | |
| | 20 ನಿ | | | | ಶಿಕ್ಷಕರು | ಬರವಣಿಗೆ ಕೆಲಸ ಪೂರ್ಣಗೊಂಡ ಡ್ರಾಯಿಂಗ್ ಹಾಳೆಗಳನ್ನು ಒಟ್ಟಿಗೆ ಸೇರಿಸಿ, ಅವುಗಳ ಮುಂಭಾಗ ಹಾಗೂ ಹಿಂಭಾಗಕ್ಕೆ ದಪ್ಪರಟ್ಟಿನ ಹಾಳೆ ಹಾಕಿ ಹೊಲೆದು ಆಲ್ಬಮ್ ತಯಾರಿಸುವರು. ನಂತರ ಅವುಗಳನ್ನು ನೋಡಲು ಮಕ್ಕಳಿಗೆ ಕೊಡುವರು. ಉತ್ತಮ ಕೆಲಸ ನಿರ್ವಹಿಸಿದ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರಶಂಸಿಸುವರು. | | | | | |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 KAN-31 | 10 ನಿ | ಕನ್ನಡ ಪದ ಓದು ಅಕ್ಷರ ಕಲಿ ಹಂತ – 1 | ವರ್ಣಮಾಲೆಯ ಕನ್ನಡ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವದು (ರ, ಗ, ಸ, ದ, ಅ) | ಅಕ್ಷರಗಳು ಮಿಂಚು ಪಟ್ಟಿಗಳು | ಶಿಕ್ಷಕ | ಮಿಂಚುಪಟ್ಟಿಗಳ ಸಹಾಯದಿಂದ ಅಕ್ಷರಗಳನ್ನು ಹೇಳಿಸುವರು. | ಕನ್ನಡ ಲಚ್ಚಿಯ ಮೆಚ್ಚಿನ ದೋಣಿ | ಸಂಯುಕ್ತಾಕ್ಷರಗಳು ಪದಗಳನ್ನು ಗುರುತಿಸಿ ಉಚ್ಚರಿಸುವ ಮತ್ತು ನಕಲು ಮಾಡುವುದು | ಪಠ್ಯ ಪುಸ್ತಕ | ಶಿಕ್ಷಕ | ಹಿಂದಿನ ಅವಧಿಯಲ್ಲಿ ನಕಲು ಮಾಡಲು ತಿಳಿಸಿದ್ದ ಗೃಹಪಾಠವನ್ನು ಪರಿಶೀಲಿಸುವರು ನಂತರ ಪಠ್ಯಪುಸ್ತಕ 21ರ ವಾಕ್ಯಗಳನ್ನು ಕಾಪಿ ಪುಸ್ತಕದಲ್ಲಿ ನಕಲು ಮಾಡಲು ಸೂಚಿಸುವರು. |
| | 30 ನಿ | | | ಸರಳ ಪದಗಳು | ಸ್ವಕಲಿಕೆ | ಪಠ್ಯಪುಸ್ತಕದ ಪುಟ 27ರ ಪದಗಳನ್ನು ಓದಿಸುವದು. ಅಕ್ಷರಗಳ ಚಿಕ್ಕ ಮಿಂಚುಪಟ್ಟಿಗಳನ್ನು ಬಳಸಿ ಸರಳ ಪದ ರಚನೆ ಮಾಡಿಸುವುದು.<br>ಉದಾ : ಅರ, ಗರ, ದರ, ಅಗರ, ಗರಗರ, ಸಗರ, ಪರಿಸರ ಇತ್ಯಾದಿ.<br>* ಮಿಂಚುಪಟ್ಟಿಯಲ್ಲಿ ರಚಿಸಿದ ಪದಗಳನ್ನು ಕಪ್ಪುಹಲಗೆಯ ಮೇಲೆ ಬರೆದು ಓದಿಸುವರು. ನಂತರ ರಟ್ಟಿನಲ್ಲಿ ರಚಿಸಿರುವ ಅಕ್ಷರಗಳ ಮಧ್ಯೆ ಬೆರಳು ಆಡಿಸುವಂತೆ ತಿಳಿಸುವರು.<br>ಉದಾ :  | | | | ಹಿರೇಮಣಿ / ಸ್ವಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 35 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಮುಂದುವರಿಸುವರು. | | | ಪಠ್ಯ ಪುಸ್ತಕ | ಶಿಕ್ಷಕ | * ಮೇಲಿನ ಅಭ್ಯಾಸ ಚಟುವಟಿಕೆ ಪರಿಶೀಲಿಸಿ ಮಾರ್ಗದರ್ಶನ ಮಾಡುವರು.<br>* ಪಠ್ಯಪುಸ್ತಕ ಪುಟ 23ರ ಭಾಷಾಭ್ಯಾಸ 'ಆ' ಚಟುವಟಿಕೆ ಹಾಗೂ ಭಾಷಾ ಚಟುವಟಿಕೆ 'ಅ'ಗಳನ್ನು ಮಾಡಿಸುವರು. |
| | 05 ನಿ | | | | | ಮೇಲಿನ ಚಟುವಟಿಕೆಗಳನ್ನು ಪರಿಶೀಲಿಸಿ ಮುಂದಿನ ಅವಧಿಗೆ ಪೂರ್ವಸಿದ್ಧತೆ ಮಾಡಿಕೊಳ್ಳುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2 (M-19) | 20 ನಿ | ಗಣಿತ<br>ಏರಿಕೆ ಮತ್ತು ಇಳಿಕೆ ಕ್ರಮ | * 1 ರಿಂದ ೯ರ ವರೆಗಿನ ಸಂಖ್ಯೆಗಳನ್ನು ಏರಿಕೆ ಕ್ರಮ ಮತ್ತು ಇಳಿಕೆ ಕ್ರಮಗಳಲ್ಲಿ ಬರೆಯುವ ಅಭ್ಯಾಸ ಮಾಡುವುದು. | ವಿವಿಧ ಗಾತ್ರಗಳ ಅಂಕಿಗಳ ಮಿಂಚುಪಟ್ಟಿಗಳು | ಶಿಕ್ಷಕ | ಮಕ್ಕಳು ಎರಡನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ತೊಡಗುವರು. | ಗಣಿತ<br>ಸರಿ ಸಂಖ್ಯೆ – ಬೆಸಸಂಖ್ಯೆ | ಎಣಿಸುವ ಮೂಲಕ ಸರಿ ಸಂಖ್ಯೆ – ಬೆಸಸಂಖ್ಯೆಗಳನ್ನು ಅರ್ಥ ಮಾಡಿಕೊಂಡು, ಗುರುತಿಸಿ ಹೆಸರಿಸುವುದು. | ಸಣ್ಣದಾದ ಆದರೆ ಎಣಿಸಲು ಸುಲಭವಾದ ಕಾಳು/ ಮಣಿ | ಶಿಕ್ಷಕ | **ಪೂರ್ವಸಿದ್ಧತಾ ಚಟುವಟಿಕೆ :** ಎಲ್ಲಾ ಮಕ್ಕಳನ್ನು ಒಂದು ಗೂಡಿಸಿ, ವೃತ್ತಾಕಾರವಾಗಿ ಓಡಿಸುತ್ತಾ, "ಬೆಟ್ಟಕ್ಕೆ ಬೆಂಕಿ ಬಿತ್ತು ಓಡಿರೋ....ಓಡಿರೋ...." ಆಟ ಆಡಿಸುವರು. |
| | 05 ನಿ | | | | ಶಿಕ್ಷಕ | ಮಕ್ಕಳನ್ನು ಗುಂಪುಗಳಲ್ಲಿ ಕೂರಿಸಿ, ವಿವಿಧ ಗಾತ್ರಗಳ ಚಿತ್ರಗಳ ಮಿಂಚುಪಟ್ಟಿಗಳನ್ನು ಕೊಟ್ಟು, ಒಂದೇ ರೀತಿಯ ಚಿತ್ರಗಳ ಕಾರ್ಡ್‌ಗಳನ್ನು ಆಯ್ದು, ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ ಜೋಡಿಸುವ ಚಟುವಟಿಕೆ ಮಾಡುವಂತೆ ಶಿಕ್ಷಕರು ಸೂಚನೆ ನೀಡುವರು. | | | | ಶಿಕ್ಷಕ | ಆಯ್ದು 4–5 ಜನರ ಗುಂಪುಗಳನ್ನು ಮಾಡಿ ಕುಳಿತುಕೊಳ್ಳುವಂತೆ ಶಿಕ್ಷಕರು ಆದೇಶ ನೀಡುವರು. ನಂತರ ಪ್ರತಿ ಗುಂಪಿಗೆ ತಮ್ಮಲ್ಲಿರುವ ಮಣಿ/ಕಾಳು (ಸುಮಾರು 50)ಗಳನ್ನು ನೀಡುವರು. |
| | 30 ನಿ | | | | ಹಿರೇಮಣಿ | ಮಕ್ಕಳು ಚಟುವಟಿಕೆಯಲ್ಲಿ ತೊಡಗುವರು.<br>ಉದಾ :  | | | | ಶಿಕ್ಷಕ | **ಕಲಿಕೆಯ ಚಟುವಟಿಕೆ :**<br>ಶಿಕ್ಷಕರು ವಿವಿಧ ಸಂಖ್ಯೆಗಳನ್ನು ಹೇಳಿದಾಗ ಮಕ್ಕಳು ಅಷ್ಟು ಕಾಳುಗಳನ್ನು ಆಯ್ಕೆ ಮಾಡಿ; ಅಷ್ಟು ಕಾಳುಗಳನ್ನು ಎರಡೆರಡರಂತೆ ಗುಂಪು ಮಾಡಿ ಕೊನೆಯಲ್ಲಿ 1 ಕಾಳು ಉಳಿಯುತ್ತದೋ ಇಲ್ಲವೋ ಎಂದು ತಿಳಿಸಲು ಹೇಳುವರು. ನಂತರ, ಶಿಕ್ಷಕರು ಸರಿ–ಬೆಸ ಸಂಖ್ಯೆಗಳನ್ನು ಮಕ್ಕಳಿಗೆ ಪರಿಚಯಿಸುವರು. ಹಾಗೂ ಸರಿ–ಬೆಸ ಸಂಖ್ಯೆಗಳನ್ನು ಗುರುತಿಸುವ ಸರಳ ವಿಧಾನವನ್ನು ಮಕ್ಕಳಿಗೆ ವಿವರಿಸುವರು. |
| | 20 ನಿ | | | | ಶಿಕ್ಷಕರು | ಶಿಕ್ಷಕರು ಮಕ್ಕಳ ಚಟುವಟಿಕೆಯನ್ನು ಪರಿಶೀಲಿಸುತ್ತಾ, ಅವರಿಗೆ ಅವಶ್ಯಕ ಮಾರ್ಗದರ್ಶನ ನೀಡುತ್ತಾ, ಪುಟ–45ರಲ್ಲಿನ ಚಟುವಟಿಕೆ ಮಾಡುವಂತೆ ಸೂಚಿಸುವರು. ಅಗತ್ಯ ಸಹಾಯ ಹಾಗೂ ಸಹಕಾರ ನೀಡುವರು. | | | ಪಠ್ಯ ಪುಸ್ತಕ | ಹಿರೇಮಣಿ | **ಅಭ್ಯಾಸ ಮತ್ತು ಬಳಕೆಯ ಚಟುವಟಿಕೆ / ಪುನರ್ಬಲನ ಚಟುವಟಿಕೆ :**<br>ಪುಟ–58, 59ರಲ್ಲಿನ ಚಟುವಟಿಕೆಯನ್ನು ಬರೆಯುವಂತೆ ಸೂಚನೆ ನೀಡುವರು.<br>ಮಕ್ಕಳು ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆ ಪರಿಶೀಲಿಸಿ, ಉತ್ತೇಜನ ಹಾಗೂ ಪ್ರೋತ್ಸಾಹ ನೀಡುವರು. | | | | ಶಿಕ್ಷಕ | ಮಕ್ಕಳ ಬರವಣಿಗೆಯನ್ನು ಪರಿಶೀಲಿಸಿ, ಅಭ್ಯಾಸ ಪುಸ್ತಕಗಳನ್ನು ತಿದ್ದುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 ಮೊದಲ 40 ನಿ KAN (31½) | 20 ನಿ | ಕನ್ನಡ<br>ಪದ ಓದು ಅಕ್ಷರ ಕಲಿ – ಹಂತ –1 | * ವರ್ಣಮಾಲೆಯ ಕನ್ನಡ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವರು (ರ, ಗ, ಸ, ದ, ಅ) | ಪಠ್ಯ ಪುಸ್ತಕ<br>ವಾಲ್ ಸ್ಲೇಟ್ | ಶಿಕ್ಷಕ | **ಪುನರ್ಬಲನ ಚಟುವಟಿಕೆ :** 'ರ, ಗ, ಸ, ದ, ಅ' ಈ ಅಕ್ಷರಗಳನ್ನು ಬರೆಯುವ ಕ್ರಮವನ್ನು ಕಪ್ಪು ಹಲಗೆಯ ಮೇಲೆ ಬರೆದು ತೋರಿಸುವರು ಹಾಗೂ ರ,ಗ,ಸ, ಈ ಅಕ್ಷರಗಳನ್ನು ಎಲ್ಲಾ ಮಕ್ಕಳಿಂದ ಒಮ್ಮೆ ಬರೆಸಿ ಸರಿಯಾಗಿ ಬರೆಯುವ ಕ್ರಮವನ್ನು ಕಲಿಸುವರು. ಇದೇ ಕ್ರಮದಲ್ಲಿ ಪಠ್ಯಪುಸ್ತಕದ ಅಭ್ಯಾಸದ ಹಾಳೆ ಭರ್ತಿ ಮಾಡಲು ಸಹಾಯವಾಗುವಂತೆ ವಾಲ್ ಸ್ಲೇಟ್‌ನಲ್ಲಿ ಅಭ್ಯಾಸ ಮಾಡುವಂತೆ ತಿಳಿಸುವರು. | ಕನ್ನಡ<br>ಲಚ್ಚಿನ ಮೆಚ್ಚಿನ ದೋಣಿ | ಸಂಯುಕ್ತಾಕ್ಷರಗಳ ಪದಗಳನ್ನು ಗುರುತಿಸಿ ಉಚ್ಚರಿಸುವುದು ಮತ್ತು ನಕಲು ಮಾಡುವುದು. | ಅಕ್ಷರಗಳ ಮಿಂಚು ಪಟ್ಟಿ | ಶಿಕ್ಷಕ | * ಹಿಂದಿನ ಅವಧಿಯಲ್ಲಿ ನಕಲು ಮಾಡಿ ತಂದಿರುವ ಕಾಪಿ ಬರಹವನ್ನು ಪರಿಶೀಲಿಸುವರು.<br>* ಅಕ್ಷರಗಳ ಮಿಂಚುಪಟ್ಟಿಗಳನ್ನು ಕೊಟ್ಟು ವಿದ್ಯಾರ್ಥಿಗಳು ಸ್ವತಂತ್ರವಾಗಿ ಮೂರಕ್ಷರದ ಪದ ರಚನೆ ಮಾಡಿ ನೋಟ್ ಪುಸ್ತಕದಲ್ಲಿ ಬರೆಯಲು ತಿಳಿಸುವರು. |
| | 20 ನಿ | | | | ಸ್ವಕಲಿಕೆ | ಮೇಲೆ ಹೇಳಲಾದ ಚಟುವಟಿಕೆಯಲ್ಲಿ ತೊಡಗುವರು. | | | | ಗುಂಪು ಚಟುವಟಿಕೆ | ಮೇಲೆ ಹೇಳಲಾದ ಚಟುವಟಿಕೆಯಲ್ಲಿ ತೊಡಗುವದು. |
| | | | | | | ಮೇಲಿನ ಚಟುವಟಿಕೆಯನ್ನು ಪರಿಶೀಲಿಸುವರು. | | | ಪಠ್ಯಪುಸ್ತಕ | ಶಿಕ್ಷಕ | * ಮಕ್ಕಳು ರಚಿಸಿ ಬರೆದಿರುವ ಪದಗಳನ್ನು ಪರಿಶೀಲಿಸುವರು.<br>* ಪಠ್ಯಪುಸ್ತಕ ಪುಟ 24ರ 'ಆ' ಚಟುವಟಿಕೆಯನ್ನು ಮಾಡಿಸುವರು.<br>ಪಠ್ಯಪುಸ್ತಕ ಪುಟ 21ರ ವಾಕ್ಯಗಳನ್ನು ನಕಲು ಮಾಡಿಕೊಂಡು ಬರಲು ತಿಳಿಸುವರು. |
| ನಂತರದ 40 ನಿ | 40 ನಿ | ಜೀವನ ವಿಜ್ಞಾನ<br>ಸಹಕಾರ | ಒಬ್ಬರು ಮತ್ತೊಬ್ಬರಿಗೆ ಪರಸ್ಪರ ಸಹಕಾರ ನೀಡುವ ಮನೋಭಾವನೆ ಬೆಳೆಸುವುದು | | **ಸೂಚನೆ :** ಒಂದು ಮತ್ತು ಎರಡೂ ತರಗತಿಗಳನ್ನು ಒಟ್ಟಿಗೆ ಕೂರಿಸಿಕೊಂಡು ಈ ಅವಧಿಯನ್ನು ಉಪಯೋಗಿಸಿಕೊಳ್ಳುವರು.<br>ಒಂದು ಮತ್ತು ಎರಡನೇ ತರಗತಿಗಳ ಮಕ್ಕಳನ್ನು ಎರಡು ತಂಡಮಾಡಿ ಎರಡೂ ತಂಡಗಳ ಮುಂದೆ ಬಕೇಟ್‌ಗಳನ್ನು ಇಟ್ಟು ಜಗ್‌ನಲ್ಲಿ ನೀರನ್ನು ಒಬ್ಬರಿಂದ ಒಬ್ಬರಿಗೆ ವರ್ಗಾಯಿಸುತ್ತಾ ತುಂಬುವಂತೆ ತಿಳಿಸುವುದು ಯಾರು ಬೇಗ ತುಂಬುತ್ತಾರೆ ಆ ತಂಡಕ್ಕೆ 'ಗೆದ್ದಂತೆ' ಎಂದು ಪ್ರೋತ್ಸಾಹ ನೀಡುವುದು. ಒಬ್ಬರಿಂದ ಒಬ್ಬರಿಗೆ ನೀರು ವರ್ಗಾಯಿಸುವುದರ ಮೂಲಕ ಪರಸ್ಪರ ಸಹಕಾರ ಬೆಳೆಸುವರು. | | | | | | 2ನೇ ತರಗತಿ ಮಕ್ಕಳು 1ನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಕಲಿಕಾ ಅಂಶ | ಕಲಿಕಾ ಉದ್ದೇಶಗಳು | ಬಳಸುವ ಬೋಧನಾ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಕಲಿಕಾ ಅಂಶ | ಕಲಿಕಾ ಉದ್ದೇಶಗಳು | ಬಳಸುವ ಬೋಧನಾ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 ಮೊದಲ 40 ನಿ | 10 ನಿ | ಮೌಲ್ಯ ಶಿಕ್ಷಣ "ಉಪಕಾರ - ಪ್ರತ್ಯುಪಕಾರ" | * ಉಪಕಾರ ಮತ್ತು ಸಹಾಯದಿಂದ ಪರಸ್ಪರರಿಗೆ ನೆರವಾಗುವ ಮನೋಭಾವ ಬೆಳೆಸಿಕೊಳ್ಳುವರು. | | ಶಿಕ್ಷಕ | ಮೊದಲಿಗೆ ಶಿಕ್ಷಕರು ಎಲ್ಲಾ ಮಕ್ಕಳನ್ನು ಒಂದೆಡೆ ಸೇರಿಸಿ, ಅವರನ್ನು ಒಂದರ ಹಿಂದೊಂದರಂತೆ ಎರಡು ವೃತ್ತಗಳಲ್ಲಿ ಕೂರಿಸುವರು ನಂತರ ಎಲ್ಲಾ ಮಕ್ಕಳಿಂದ, ತಮಗೆ ತಿಳಿದ ಕೀಟಗಳನ್ನು ಹೆಸರಿಸುವಂತೆ ಸೂಚಿಸುವರು. | | | | | ಎರಡೂ ತರಗತಿಯ ಮಕ್ಕಳೊಂದಿಗೆ ಸೇರಿ, ಕಥೆ ಕೇಳುವರು ಹಾಗೂ ಇತರೇ ಚಟುವಟಿಕೆಗಳಲ್ಲಿ ತೊಡಗುವರು. |
| | 20 ನಿ | | | ಕಥೆಯನ್ನು ತೋರಿಸುವ ಸನ್ನಿವೇಶಗಳ ಚಿತ್ರಪಟ | ಶಿಕ್ಷಕ | ಶಿಕ್ಷಕರು ಮಕ್ಕಳನ್ನು ಕುರಿತು, ಹಾವ-ಭಾವದೊಂದಿಗೆ, ಸ್ವಾರಸ್ಯಕರವಾಗಿ "ಪಾರಿವಾಳ-ಇರುವೆ ಹಾಗೂ ಬೇಡ (ವ್ಯಾಧ)"ನ ಕಥೆ ಹೇಳುವರು.<br>"ಒಂದು ಕಾಡಿನಲ್ಲಿ ಒಂದು ಪಾರಿವಾಳ ಹಾಗೂ ಇರುವೆಗಳು ಸ್ನೇಹದಿಂದಿದ್ದವು............................................................................................ ಬೇಡನು ಪಾರಿವಾಳದ ಕಡೆಗೆ ಗುರಿ ಇಟ್ಟಿದ ಬಾಣ ಬೇರೆ ದಿಕ್ಕಿನಲ್ಲಿ ಚಲಿಸಿ ಪಾರಿವಾಳದ ಪ್ರಾಣ ಉಳಿಯಿತು. ಹೀಗೆ ಇರುವೆಯು ಪರಿವಾಳದ ಪ್ರಾಣ ಉಳಿಸಿ, ಉಪಕಾರಕ್ಕೆ ಪ್ರತ್ಯುಪಕಾರ ಮಾಡಿತು"........ ಇತ್ಯಾದಿ. | | | | | |
| | 10 ನಿ | | | | ಶಿಕ್ಷಕ | ಹೀಗೆ ಶಿಕ್ಷಕರು ಕಥೆ ಹೇಳಿದ ನಂತರ ಮಕ್ಕಳಿಂದ ಕಥೆ ನೀತಿ ಹೇಳಿಸುವರು. ಅವಶ್ಯಕವಿದ್ದಲ್ಲಿ ಕಥೆಯ ನೀತಿಯನ್ನು ವಿವರಿಸಿ, ಆಯ್ದ ಮಕ್ಕಳಿಗೆ ತಮ್ಮದೇ ವಾಕ್ಯಗಳಲ್ಲಿ ಕಥೆಯನ್ನು ಮತ್ತೊಮ್ಮೆ ಹೇಳುವಂತೆ ಸೂಚಿಸುವರು.<br>[ಮಕ್ಕಳಿಂದ ಇತರೆ ಕಥೆಗಳನ್ನೂ ಹೇಳಿಸಬಹುದಾಗಿದೆ] | | | | | |
| ನಂತರದ 40 ನಿ | | ಲಲಿತಕಲೆ ಅಭಿನಯ ಗೀತೆಗಳು | * ಗೀತೆಗಳಿಗೆ ನೃತ್ಯ ಅಭಿನಯ ಮಾಡುವ ಸಾಮರ್ಥ್ಯ ಬೆಳೆಸಿಕೊಳ್ಳುವರು | | ಶಿಕ್ಷಕ | ಎರಡೂ ತರಗತಿಯ ಮಕ್ಕಳನ್ನು ಸೇರಿಸಿಕೊಂಡು ಮಕ್ಕಳಿಗೆ ಗೊತ್ತಿರುವ ಅಭಿನಯ / ನೃತ್ಯ ಗೀತೆಗಳನ್ನು ಅಭ್ಯಾಸ / ಪ್ರದರ್ಶನ ಮಾಡಿಸುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>KAN 32½ | 10 ನಿ | ಕನ್ನಡ<br>ಪದ ಓದು ಅಕ್ಷರ ಕಲಿ ಹಂತ –1 | * ವರ್ಣಮಾಲೆಯ ಕನ್ನಡ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವುದು (ರ, ಗ, ಸ, ದ, ಅ) | ಪಠ್ಯ ಪುಸ್ತಕ | ಶಿಕ್ಷಕ | * ಹಿಂದಿನ ತರಗತಿಯಲ್ಲಿ ನೀಡಿದ ಅಭ್ಯಾಸವನ್ನು ಪರಿಶೀಲಿಸುವರು.<br>* ಪಠ್ಯ ಪುಸ್ತಕ ಪುಟಸಂಖ್ಯೆ 28 ಮತ್ತು 29ರ ಅಭ್ಯಾಸದ ಹಾಳೆಯನ್ನು ಭರ್ತಿ ಮಾಡಲು ಸೂಚಿಸುವರು. | ಕನ್ನಡ<br>ಲಚ್ಚಿಯ ಮೆಚ್ಚಿನ ದೋಣಿ | ಸಂಯುಕ್ತಾಕ್ಷರಗಳು ಪದಗಳನ್ನು ಗುರುತಿಸಿ ಉಚ್ಚರಿಸುವ ಮತ್ತು ನಕಲು ಮಾಡುವುದು. | ಮಕ್ಕಳು ಬರೆದಿರುವ ಅಭ್ಯಾಸ ಪುಸ್ತಕ | ಶಿಕ್ಷಕ | ಮಕ್ಕಳು ಪಠ್ಯಪುಸ್ತಕದಲ್ಲಿ ನಕಲು ಮಾಡಿರುವ ಪಾಠವನ್ನು ಪರಿಶೀಲಿಸುವರು. |
| | 30 ನಿ | | | | ಸ್ವಕಲಿಕೆ | ಮೇಲೆ ಹೇಳಲಾದ ಚಟುವಟಿಕೆಯಲ್ಲಿ ತೊಡಗುವರು. | | | ಪಠ್ಯ ಪುಸ್ತಕ | ಶಿಕ್ಷಕ | ಪಠ್ಯಪುಸ್ತಕ ಪುಟಸಂಖ್ಯೆ 21 ಮತ್ತು 22ರ ಕಾಪಿ ಬರವಣಿಗೆಯನ್ನು ಪೂರ್ಣಗೊಳಿಸುವರು. |
| | 05 ನಿ | | | ಪಠ್ಯ ಪುಸ್ತಕ<br>ವಾಲ್‌ಸ್ಲೇಟ್ | ಶಿಕ್ಷಕ | * ಮೇಲೆ ಹೇಳಲಾದ ಚಟುವಟಿಕೆಯನ್ನು ಪರಿಶೀಲಿಸಿ ತಪ್ಪುಗಳನ್ನು ಸರಿಪಡಿಸಿ ಅಭ್ಯಾಸದ ಹಾಳೆ ಪೂರ್ಣಗೊಳಿಸುವರು.<br>* ಪಠ್ಯಪುಸ್ತಕ ಪುಟ 28ರಲ್ಲಿನ ಪದಗಳನ್ನು ಪ್ರತಿ ವಿದ್ಯಾರ್ಥಿಯಿಂದ ಅಕ್ಷರ ಗುರುತಿಸಿ ಓದಿಸುವರು.<br>* ಪುಟ ಸಂಖ್ಯೆ 30ರ 'ಆ' ಮತ್ತು 'ಇ' ಚಟುವಟಿಕೆಗಳನ್ನು ಮಾಡಿಸುವರು. | | | | ಶಿಕ್ಷಕ | ಪಠ್ಯಪುಸ್ತಕ 24ರಲ್ಲಿ ಕೊಟ್ಟಿರುವ ಚಿತ್ರಕ್ಕೆ ಬಣ್ಣ ಹಾಕಲು ತಿಳಿಸುವರು. |
| | 30 ನಿ | | | | | | | | | ಸ್ವಕಲಿಕೆ | ಮೇಲೆ ಹೇಳಲಾದ ಚಟುವಟಿಕೆಯಲ್ಲಿ ತೊಡಗುವರು. |
| | 05 ನಿ | | | | ಶಿಕ್ಷಕ | ರ,ಗ,ಸ,ದ,ಅ, ಈ ಅಕ್ಷರಗಳನ್ನು ಚೌಕಳಿ ನೋಟ್ ಪುಸ್ತಕದಲ್ಲಿ ನಕಲು ಮಾಡಿಕೊಂಡು ಬರಲು ತಿಳಿಸುವರು. | | | ಕಾಪಿ ಪುಸ್ತಕ | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲನೆ ಮಾಡಿ ಪ್ರೋತ್ಸಾಹಿಸುವರು.<br>* ಕಾಪಿ ಪುಸ್ತಕದಲ್ಲಿ ಒಂದು ಪುಟದಷ್ಟು ಪಾಠವನ್ನು ನಕಲು ಮಾಡಿಕೊಂಡು ಬರಲು ತಿಳಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2** (M-20) | 10 ನಿ | **ಗಣಿತ** ಏರಿಕೆ ಮತ್ತು ಇಳಿಕೆ ಕ್ರಮ | * 1 ರಿಂದ ೯ರ ವರೆಗಿನ ಸಂಖ್ಯೆಗಳನ್ನು ಏರಿಕೆ ಕ್ರಮ ಮತ್ತು ಇಳಿಕೆ ಕ್ರಮದಲ್ಲಿ ಬರೆಯುವ ಅಭ್ಯಾಸ ಮಾಡುವುದು | ವಿವಿಧ ಅಂಕಿಗಳ ಮಿಂಚುಪಟ್ಟಿಗಳು | ಶಿಕ್ಷಕ | ನಾಲ್ಕು ಜನರ ಗುಂಪುಗಳಲ್ಲಿ ಮಕ್ಕಳನ್ನು ಕೂರಿಸಿ ವಿವಿಧ ಸಂಖ್ಯೆಗಳನ್ನು ಹೊಂದಿರುವ ಕಾರ್ಡ್‌ಗಳನ್ನು ಗುಂಪುಗಳಿಗೆ ಕೊಟ್ಟು, ಅವುಗಳನ್ನು ಇಳಿಕೆ ಕ್ರಮದಲ್ಲಿ ಜೋಡಿಸುವುದನ್ನು ಒಮ್ಮೆ ತೋರಿಸಿ, ನಂತರ ಮಕ್ಕಳಿಗೆ ವಿವಿಧ ಕಾರ್ಡ್‌ಗಳನ್ನು ಆಯ್ಕೆ ಮಾಡಿ, ಇಳಿಕೆ ಕ್ರಮದಲ್ಲಿ ಜೋಡಿಸಲು ಹೇಳುವರು. | **ಗಣಿತ** ಸರಿ ಸಂಖ್ಯೆ – ಬೆಸ ಸಂಖ್ಯೆ | ಎಣಿಸುವ ಮೂಲಕ ಸರಿಸಂಖ್ಯೆ – ಬೆಸಸಂಖ್ಯೆಗಳನ್ನು ಅರ್ಥ ಮಾಡಿಕೊಂಡು ಗುರುತಿಸಿ ಹೆಸರಿಸುವುದು | ಪಠ್ಯ ಪುಸ್ತಕ | ಶಿಕ್ಷಕ | ಹಿರೇಮಣಿಯ ನೇತೃತ್ವದಲ್ಲಿ "ಕೆರೆ–ದಡ" ಆಟದಂತೆ "ಸರಿ–ಬೆಸ" ಸಂಖ್ಯೆ ಹೇಳಿದಾಗ ಕ್ರಮವಾಗಿ ಒಳಗೆ ಮತ್ತು ಹೊರಗೆ ಜಿಗಿಯುವ ಆಟ ಆಡುವಂತೆ ಸೂಚನೆ ನೀಡುವರು. ಮಕ್ಕಳು ಸರಿ–ಬೆಸ (ಕೆರೆ–ದಡ) ಆಟ ಆಡುವರು. (ಸರಿ–ಬೆಸ ಎನ್ನುವ ಬದಲು ಸಂಖ್ಯೆಗಳನ್ನು ಹೇಳಿ; ಉದಾ: ಸರಿ ಸಂಖ್ಯೆ ಹೇಳಿದಾಗ ಒಳಗೆ ಬೆಸ ಸಂಖ್ಯೆ ಹೇಳಿದ ಹೊರಗೆ ಜಿಗಿಯುವ ಆಟ) |
| | 25 ನಿ | | | | ಶಿಕ್ಷಕ | ಮಕ್ಕಳು ಇಳಿಕೆ ಕ್ರಮದಲ್ಲಿ ಜೋಡಿಸಿದ ಕಾರ್ಡ್‌ಗಳು ಸರಿಯಾದ ಕ್ರಮದಲ್ಲಿ ಇದೆಯೇ ವೀಕ್ಷಿಸುತ್ತಾ, ಅವರಿಗೆ ಅವಶ್ಯಕ ಪುನರ್ಮನನ ಮಾಡಿಸುವರು. | | | | ಹಿರೇಮಣಿ | ಮಕ್ಕಳು ಆಟದಲ್ಲಿ ತೊಡಗುವರು. |
| | 10 ನಿ | | | ಪಠ್ಯ ಪುಸ್ತಕ | ಶಿಕ್ಷಕ | ಶಿಕ್ಷಕರು ಮಕ್ಕಳಿಗೆ ಪಠ್ಯಪುಸ್ತಕದ ಪುಟ–45ರಲ್ಲಿನ ಅಭ್ಯಾಸವನ್ನು ಮಾಡುವಂತೆ ಸೂಚಿಸುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ ಮುಂದಿನ ಚಟುವಟಿಕೆಗೆ ಸೂಕ್ತ ಸಿದ್ಧತೆ ಮಾಡಿಕೊಳ್ಳುವರು. |
| | 25 ನಿ | | | | ಹಿರೇಮಣಿ | ಮಕ್ಕಳು ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :** ಪುಟ 60, 61, 62ರಲ್ಲಿನ ಚಟುವಟಿಕೆಯನ್ನು ಮಕ್ಕಳಿಂದ ಮಾಡಿಸುತ್ತಾ ಮಕ್ಕಳು ಸರಿ–ಬೆಸ ಸಂಖ್ಯೆಗಳನ್ನು ಸರಿಯಾಗಿ ಗುರುತಿಸುವರೇ ಎಂದು ಪರಿಶೀಲಿಸಿ, ತಪ್ಪಾಗಿ ಗುರುತಿಸಿದ ವಿದ್ಯಾರ್ಥಿಗಳಿಗೆ ಹೆಚ್ಚು ಅಭ್ಯಾಸ (ಬೇರೆ ವಸ್ತುಗಳನ್ನು ಬಳಸಿ) ಮಾಡಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಬರವಣಿಗೆ ಪರಿಶೀಲಿಸಿ ಸರಿ–ತಪ್ಪು ಪರೀಕ್ಷಿಸಿ, ಸೂಕ್ತ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಅಂದವಾಗಿ ಹಾಗೂ ಅಚ್ಚುಕಟ್ಟಾಗಿ ಬರೆದಿರುವ ಪುಸ್ತಕ ಗುರುತಿಸಿ, ಆ ವಿದ್ಯಾರ್ಥಿಯನ್ನು ಚಪ್ಪಾಳೆಯ ಮೂಲಕ ಪ್ರಶಂಸಿಸಿ, ಪ್ರೋತ್ಸಾಹಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 10 ನಿ | ಸಾ.ಉ.ಉ.ಕಾ.<br>ತೆಂಗಿನ ಗರಿಯಿಂದ ಪೀಪಿ ಮಾಡುವುದು | * ಲಭ್ಯ ವಸ್ತುಗಳನ್ನು ಬಳಸಿ ಆಟಿಕೆ ತಯಾರಿಸುವುದು. | ಅಭಿನಯ ಗೀತೆ | ಶಿಕ್ಷಕ | ಎರಡೂ ತರಗತಿಯ ಮಕ್ಕಳನ್ನು ಒಟ್ಟಿಗೆ ಕೂರಿಸಿಕೊಂಡು ಯಾವುದಾದರೂ ಒಂದು ಹಾಡನ್ನು ಹಾಡಿಸುವರು. | | | | | ಒಂದನೇ ತರಗತಿಯಲ್ಲಿನ ಚಟುವಟಿಕೆಯಲ್ಲಿ ತೊಡಗುವರು. |
| | 20 ನಿ | | | ತೆಂಗಿನ ಗರಿ | ಶಿಕ್ಷಕ | ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿಕೊಂಡು ಶಿಕ್ಷಕರು ತಮ್ಮ ಕೈಯಲ್ಲಿರುವ ತೆಂಗಿನ ಗರಿಯಿಂದ ಪೀಪಿ ಸುತ್ತುವ ವಿಧಾನವನ್ನು ಹೇಳಿ ಕೊಡುವರು.<br>* ಪೀಪಿಯನ್ನು ಪೂರ್ಣಗೊಳಿಸಿ 'ಊದಿ' ತೋರಿಸುವರು. | | | | | |
| | 40 ನಿ | | | | ಶಿಕ್ಷಕ | ಎಲ್ಲಾ ಮಕ್ಕಳಿಗೂ ತೆಂಗಿನ ಗರಿಗಳನ್ನು ನೀಡುವರು. ತಮ್ಮ ಮಾರ್ಗದರ್ಶನದಲ್ಲಿ ಎಲ್ಲಾ ಮಕ್ಕಳಿಂದ ಪೀಪಿ ಸುತ್ತಿಸುವರು. ಹಾಗೂ ಎಲ್ಲಾ ಮಕ್ಕಳು ಕ್ರಮವಾಗಿ ಮಾಡಲು ಅಗತ್ಯ ನೆರವು ನೀಡುವರು.<br>* ಮೇಲಿನ ಚಟುವಟಿಕೆಯನ್ನು ಪೂರ್ಣಗೊಳಿಸುವರು. | | | | | |
| | 10 ನಿ | | | | ಸ್ವಕಲಿಕೆ | ಪೀಪಿ ಊದಿ, ಆಟ ಆಡುವರು.<br>ಶಿಕ್ಷಕರು ಮುಂದಿನ ಅವಧಿಗೆ ಸಿದ್ಧತೆ ಮಾಡಿಕೊಳ್ಳುವರು. | | | | | |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **4** **EVS-20** | 10 ನಿ | ಪರಿಸರ ಅಧ್ಯಯನ ನಮ್ಮ ದೇಹ | ದೇಹದ ಮುಖ್ಯ ಭಾಗಗಳನ್ನು ಗುರುತಿಸುವರು | ಅಭಿನಯ ಗೀತೆ | ಶಿಕ್ಷಕ | 1 ಮತ್ತು 2ನೇ ತರಗತಿಯ ಮಕ್ಕಳನ್ನು ಒಟ್ಟಾಗಿ ನಿಲ್ಲಿಸಿ ಅಭಿನಯಗೀತೆ ಮಾಡಿಸಲು ಅಗತ್ಯ ಸೂಚನೆ ನೀಡಿ ಸಿದ್ಧಗೊಳಿಸುವರು. | ಪರಿಸರ ಅಧ್ಯಯನ ನಮ್ಮ ಸುತ್ತಮುತ್ತ | ಮನುಷ್ಯ ಮತ್ತು ಪರಿಸರದ ಪರಸ್ಪರ ಸಂಬಂಧಗಳನ್ನು ಅರ್ಥೈಸಿಕೊಂಡು ಭೌಗೋಳಿಕ ಲಕ್ಷಣಗಳ ಬಗ್ಗೆ ಮಾಹಿತಿ ಪಡೆಯುವರು. | ಅಭಿನಯ ಗೀತೆ | ಶಿಕ್ಷಕ | 1ನೇ ತರಗತಿಯ ಚಟುವಟಿಕೆಯಲ್ಲಿ ತೊಡಗುವಂತೆ ತಿಳಿಸುವರು. |
| | 30 ನಿ | | | | ಶಿಕ್ಷಕ | ಮಕ್ಕಳನ್ನು ವೃತ್ತಾಕಾರವಾಗಿ ನಿಲ್ಲಿಸಿ "ಡಿಂಗುಟಿಕ, ಡಿಂಗಟಕ...........................ನಾನು ನೋಡುವೆ ಕಣ್ಣುಗಳಿಂದಲೇ ಎಂಬ ಹಾಡನ್ನು ಹೇಳಿಕೊಡುವರು. (ಅಭಿನಯ ಗೀತೆ) | | | | ಶಿಕ್ಷಕ | 1ನೇ ತರಗತಿಯ ಚಟುವಟಿಕೆಯಲ್ಲಿ 2ನೇ ತರಗತಿಯ ಮಕ್ಕಳು ಪಾಲ್ಗೊಳ್ಳುವಂತೆ ತಿಳಿಸುವರು. |
| | 05 ನಿ | | | ದೇಹದ ಅಂಗಗಳ ಚಾರ್ಟ್ | ಶಿಕ್ಷಕ | ಪ್ರತಿ ಮಗುವಿನಿಂದ ದೇಹದ ಪ್ರಮುಖ ಹೊರ ಅಂಗಗಳನ್ನು ಗುರ್ತಿಸಿ ಹೆಸರಿಸಲು ಸೂಚಿಸುವರು. (ಹಿರೇಮಣಿಯ ಸಹಾಯ) | | | | ಶಿಕ್ಷಕ | "ನಮ್ಮ ಸುತ್ತಮುತ್ತ" ಪಾಠಕ್ಕೆ ಮೌಲ್ಯಮಾಪನ ಮಾಡಲು ಅಗತ್ಯ ಸಿದ್ಧತೆ ಮಾಡಿಕೊಳ್ಳುವರು. |
| | 30 ನಿ | | | | ಹಿರೇಮಣಿ | ಮೇಲೆ ಹೇಳಲಾದ ಚಟುವಟಿಕೆಯಲ್ಲಿ ತೊಡಗುವರು. | | | ಕಲಿಕಾ ಹಂತದಲ್ಲಿ ಬಳಸಿದ ಟಿ.ಎಲ್.ಎಮ್‌ಗಳು | ಶಿಕ್ಷಕ | **ಮೌಲ್ಯಮಾಪನ ಚಟುವಟಿಕೆ :** ಇದುವರೆಗೆ ಕಲಿಕಾಂಶ ಹಂತ, ಅಭ್ಯಾಸ ಹಂತದಲ್ಲಿ ಬಳಸಲಾದ ಸಾಮಗ್ರಿಗಳನ್ನು ಬಳಸಿಕೊಂಡು ವೈಯಕ್ತಿಕವಾಗಿ ಪ್ರಶ್ನಿಸಿ ಉತ್ತರ ಪಡೆಯುತ್ತಾ ಮೌಲ್ಯಮಾಪನ ಪೂರೈಸುವರು. |
| | 05 ನಿ | | | | ಶಿಕ್ಷಕ | ಎರಡೂ ತರಗತಿಯ ಚಟುವಟಿಕೆಗಳನ್ನು ಪರಿಶೀಲಿಸಿ ಮುಂದಿನ ಅವಧಿಗೆ ಅಗತ್ಯ ಸಿದ್ಧತೆ ಮಾಡಿಕೊಳ್ಳುವರು. | | | | | |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **1** ಮೊದಲ 40 ನಿ | 40 ನಿ | ಜೀವನ ವಿಜ್ಞಾನ ದೈಹಿಕ ಶಿಕ್ಷಣ | ಸರಳ ದೈಹಿಕ ವ್ಯಾಯಾಮಗಳನ್ನು ಕಲಿಯುವರು | ಶಾಲಾ ವ್ಯಾಯಾಮ ಸಾಧನಗಳು | ಶಿಕ್ಷಕ | 1 ಮತ್ತು 2ನೇ ತರಗತಿಯ ಮಕ್ಕಳನ್ನು ಸೂಕ್ತ ಅಂತರದಲ್ಲಿ ನಿಲ್ಲಿಸಿಕೊಂಡು ಸಾಮೂಹಿಕ ಕವಾಯಿತು ಮಾಡಿಸುವರು. | | | | | 1ನೇ ತರಗತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| **2** KAN 33½ | 15 ನಿ | ಕನ್ನಡ ಪದ ಓದು ಅಕ್ಷರ ಕಲಿ : ಹಂತ – 1 | * ವರ್ಣಮಾಲೆಯ ಕನ್ನಡ ಅಕ್ಷರಗಳನ್ನು ಒಟ್ಟಾಗಿ ಮತ್ತು ಬಿಡಿಯಾಗಿ ಗುರುತಿಸುವರು (ರ, ಗ, ಸ, ದ, ಅ) | ಪಠ್ಯ ಪುಸ್ತಕ | ಶಿಕ್ಷಕ | ಹಿಂದಿನ ತರಗತಿಯಲ್ಲಿ ನೀಡಲಾದ ಅಭ್ಯಾಸಗಳನ್ನು ಪರಿಶೀಲಿಸುವರು. ಹಿರೇಮಣಿಯ ನೇತೃತ್ವದಲ್ಲಿ ಹಿರೇಮಣಿ ಹೇಳಿದ ಅಕ್ಷರಗಳನ್ನು ಇತರೆ ವಿದ್ಯಾರ್ಥಿಗಳು ಕಪ್ಪು ಹಲಗೆಯ ಮೇಲೆ ಬರೆಯಲು ಸೂಚಿಸುವರು. | ಕನ್ನಡ ಲಚ್ಚಿಯ ಮೆಚ್ಚಿನ ದೋಣಿ | ಸಂಯುಕ್ತಾಕ್ಷರಗಳು, ಪದಗಳನ್ನು ಗುರುತಿಸಿ ಉಚ್ಚರಿಸುವ ಮತ್ತು ನಕಲು ಮಾಡುವುದು. | ಕಾಪಿ ಬರವಣಿಗೆ ಪುಸ್ತಕ | ಶಿಕ್ಷಕ | ಮಕ್ಕಳ ಕಾಪಿ ಬರವಣಿಗೆಯನ್ನು ಪರಿಶೀಲಿಸುವುದು. |
| | 40 ನಿ | | | ಚಿತ್ರಗಳ ಪದಗಳ ಮಿಂಚು ಪಟ್ಟಿಗಳು | ಸ್ವಕಲಿಕೆ ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | ಪದಗಳ ವಾಕ್ಯಗಳ ಮಿಂಚು ಪಟ್ಟಿಗಳು | ಶಿಕ್ಷಕ | **ಮೌಲ್ಯ ಮಾಪನ ಹಂತ :**<br>ಪಠ್ಯಭಾಗಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.<br>ಮಕ್ಕಳನ್ನು ವೈಯಕ್ತಿಕವಾಗಿ ಪ್ರಶ್ನಿಸಿ ಉತ್ತರ ಪಡೆಯುವರು.<br>* ಕಲಿಕಾಂಶದಲ್ಲಿ ಬಳಸಲಾದ ಪದಗಳ ಮತ್ತು ವಾಕ್ಯಗಳ ಮಿಂಚುಪಟ್ಟಿಗಳನ್ನು ಕೊಟ್ಟು ಓದಿಸುವರು.<br>* ಸಂಯುಕ್ತಾಕ್ಷರಗಳನ್ನು ಕೇಳಿ; ಕೇಳಿದ ಸಂಯುಕ್ತಾಕ್ಷರಗಳನ್ನು ವಿದ್ಯಾರ್ಥಿಯಿಂದ ಕಪ್ಪು ಹಲಗೆಯ ಮೇಲೆ ಬರೆಸುವರು. |
| | 25 ನಿ | | | | ಶಿಕ್ಷಕ | **ಮೌಲ್ಯ ಮಾಪನ ಹಂತ :**<br>* ಮಿಂಚು ಪಟ್ಟಿಗಳನ್ನು ಕೊಟ್ಟು ಓದಿಸುವರು.<br>* ಚಿತ್ರಗಳ ಮಿಂಚುಪಟ್ಟಿಗಳು ಮತ್ತು ಪದಗಳ ಮಿಂಚು ಪಟ್ಟಿಗಳನ್ನು ಗುಂಪಿನಲ್ಲಿಟ್ಟು ಅವುಗಳನ್ನು ಸಂಬಂಧಿಸಿದ ಚಿತ್ರಕ್ಕೆ ಸಂಬಂಧಿಸಿದ ಪದ ಜೋಡಿಸುವಂತೆ ತಿಳಿಸುವರು.<br>ಪುಟ – 30ರ 'ಈ' ಚಟುವಟಿಕೆಯನ್ನು ಬಳಸಿಕೊಳ್ಳುವರು.<br>* ನಿರ್ದಿಷ್ಟ ಅಕ್ಷರಗಳ ಮಿಂಚುಪಟ್ಟಿಗಳಿಂದ ಆರಿಸಿಕೊಡುವ ಚಟುವಟಿಕೆ ನಂತರ ಮುಂದಿನ ತರಗತಿಗೆ ಪೂರ್ವಸಿದ್ಧತೆ ಮಾಡಿಕೊಳ್ಳುವರು. | | | ಪಠ್ಯ ಪುಸ್ತಕ | ಹಿರೇಮಣಿ | ಪಠ್ಯಪುಸ್ತಕ ಪುಟಸಂಖ್ಯೆ 23, 24ರಲ್ಲಿ ಈಗಾಗಲೇ ಪೂರ್ಣಗೊಳಿಸಿರುವ ಭಾಷಾಭ್ಯಾಸದ ಚಟುವಟಿಕೆಗಳನ್ನು ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಂದ ಓದಿಸುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 10 ನಿ | ಸಾ.ಉ.ಉ.ಕಾ.<br>ಕಾಗದದಿಂದ ದೋಣಿ ತಯಾರಿಕೆ | ಮಕ್ಕಳಲ್ಲಿ ಕಾಗದದಿಂದ ಆಕೃತಿ ತಯಾರಿಕಾ ವಿಧಾನಗಳನ್ನು ತಿಳಿಸುವುದು | ಕಥೆ | ಶಿಕ್ಷಕ | ಎಲ್ಲಾ ಮಕ್ಕಳನ್ನು ಒಟ್ಟಾಗಿ ಸೇರಿಸಿಕೊಂಡು ಒಂದು ಕಥೆ ಹೇಳುವರು. | | | | | ಒಂದನೇ ತರಗತಿಯಲ್ಲಿರುವ ಸಾಮರ್ಥ್ಯಕ್ಕೆ ತಕ್ಕಂತೆ ಎರಡನೇ ತರಗತಿಯ ಮಕ್ಕಳೂ ಭಾಗವಹಿಸಿ ಸಾಮರ್ಥ್ಯಗಳಿಸುವರು. |
| | 20 ನಿ | | | ಕಾಗದ, ಬಣ್ಣದ ಕಾಗದ, (ಚೌಕಾಕಾರದ್ದು) | ಶಿಕ್ಷಕ | ಶಿಕ್ಷಕರು ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿಕೊಂಡು ತಮ್ಮಲ್ಲಿರುವ ಕಾಗದದಿಂದ ದೋಣಿ ಮಾಡುವ ಕ್ರಮವನ್ನು ವಿವರಿಸಿ ಹೇಳುತ್ತಾ ಕ್ರಮವಾಗಿ ಮಾಡಿ ತೋರಿಸುವರು. | | | | | |
| | 40 ನಿ | | | | ಶಿಕ್ಷಕ | ಪ್ರತಿ ಮಗುವಿಗೂ ಒಂದೊಂದು ಬಣ್ಣದ ಚೌಕಳಿ ಕಾಗದವನ್ನು ಕೊಟ್ಟು ಪ್ರತಿ ಮಗುವಿನಿಂದ ಕ್ರಮವಾಗಿ ದೋಣಿ ಮಾಡಿಸುವರು. | | | | | |
| | 10 ನಿ | | | | ಶಿಕ್ಷಕ | ದೋಣಿ ತಯಾರಿಕೆಯ ನಂತರ ಒಂದು ಅಭಿನಯಗೀತೆಯನ್ನು ಹೇಳಿಕೊಟ್ಟು ತರಗತಿಯ ಅವಧಿಯನ್ನು ಮುಗಿಸುವರು. | | | | | |
| ದಿನ ೩೧<br>1<br>KAN 34½ | 15 ನಿ | ಕನ್ನಡ<br>ಸಣ್ಣಿ ಮದುವೆ | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗಳು, ಗೀತೆಗಳು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು | ಪ್ರಾಸ ಗೀತೆಗಳು | ಶಿಕ್ಷಕ | **ಪೂರ್ವ ಸಿದ್ಧತಾ ಚಟುವಟಿಕೆ :**<br>ಮಕ್ಕಳನ್ನು ವೃತ್ತಾಕಾರವಾಗಿ ಕೂರಿಸಿ ನರಿ ಕಥೆಯನ್ನು ಅಭಿನಯ ಪೂರಕವಾಗಿ ಹೇಳುವರು. ಸಂಬಂಧಿಸಿದಂತೆ ಸರಳ ಪ್ರಶ್ನೆಗಳನ್ನು ಕೇಳುವರು. | ಕನ್ನಡ<br>ಲಚ್ಚಿಯ ಮೆಚ್ಚಿನ ದೋಣಿ | ಸಂಯುಕ್ತಾಕ್ಷರಗಳು ಪದಗಳನ್ನು ಗುರುತಿಸಿ ಉಚ್ಚರಿಸುವರು ಮತ್ತು ನಕಲು ಮಾಡುವರು. | | ಶಿಕ್ಷಕ | * ಒಂದನೇ ತರಗತಿಯ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು.<br>* ಪಾಠವನ್ನು ನಕಲು ಮಾಡಲು ತಿಳಿಸುವರು. |
| | 30 ನಿ | | | | ಶಿಕ್ಷಕ | ಜನಪ್ರಿಯ ಶಿಶುಪ್ರಾಸವೊಂದನ್ನು ಹೇಳಿಕೊಡುವರು ಉದಾ : ಗೇರ್ ಗೇರ್ ಮಂಗಣ್ಣ.<br>ಮಕ್ಕಳು ತಮಗೆ ತಿಳಿದ ಸ್ಥಳೀಯ ಪರಿಸರದ ಜನಪ್ರಿಯ ಪ್ರಾಸಗಳನ್ನು ಹೇಳಲು ಅವಕಾಶ ನೀಡಿ ಪ್ರೋತ್ಸಾಹಿಸುವರು. | | | | ಸ್ವಕಲಿಕೆ | ಮೇಲೆ ಹೇಳಲಾದ ಚಟುವಟಿಕೆಯಲ್ಲಿ ತೊಡಗುವರು. |
| | 30 ನಿ | | | ಪಠ್ಯ ಪುಸ್ತಕ | ಹಿರೇಮಣಿ ಸ್ವಕಲಿಕೆ | ಪದ ಓದು ಅಕ್ಷರ ಕಲಿ ಹಂತ – ೧ರ ಅಕ್ಷರಗಳನ್ನು ಬರೆಯಲು ಹೇಳುವುದು. ಮಕ್ಕಳು ಅಭ್ಯಾಸದಲ್ಲಿ ತೊಡಗುವರು | | | ಒತ್ತಕ್ಷರಗಳು ಮಿಂಚು ಪಟ್ಟಿಗಳು ಮತ್ತು ಪದಗಳು | ಶಿಕ್ಷಕ | ಮಕ್ಕಳು ನಕಲು ಮಾಡಿದ ಪಾಠವನ್ನು ಪರಿಶೀಲಿಸುವರು.<br>* ಒತ್ತಕ್ಷರಗಳ ಪದಗಳುಳ್ಳ ವಾಕ್ಯಗಳ ಮಿಂಚುಪಟ್ಟಿಗಳನ್ನು ಕೊಟ್ಟು ಓದಿಸುವರು.<br>* ಒತ್ತಕ್ಷರಗಳುಳ್ಳ ಪದಗಳನ್ನು ಹೇಳಿ ಪ್ರತಿ ಮಗುವಿನಿಂದ ಕಪ್ಪು ಹಲಗೆಯ ಮೇಲೆ ಬರೆಸುವರು.<br>* ಮಿಂಚು ಪಟ್ಟಿಗಳಲ್ಲಿರುವ ಪದಗಳಿಗೆ ಆದಿ–ಅಂತ್ಯದಲ್ಲಿ ಅಕ್ಷರ ಸೇರಿಸಿ ಹೊಸಪದ ರಚಿಸುವಂತೆ ಹೇಳುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆ ಪರಿಶೀಲಿಸಿ ಅಗತ್ಯ ಮಾರ್ಗದರ್ಶನ ನೀಡುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳನ್ನು ಪ್ರಶಂಸಿಸುವರು. |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **2** (M-21) | 15 ನಿ | **ಗಣಿತ** ಏರಿಕೆ ಮತ್ತು ಇಳಿಕೆ ಕ್ರಮ | * 1 ರಿಂದ 9ರ ವರೆಗಿನ ಸಂಖ್ಯೆಗಳನ್ನು ಏರಿಕೆ ಕ್ರಮ ಮತ್ತು ಇಳಿಕೆ ಕ್ರಮದಲ್ಲಿ ಬರೆಯುವ ಅಭ್ಯಾಸ ಮಾಡುವುದು | 1–9 ಅಂಕಿಗಳಿರುವ ದಾಳಗಳು | ಶಿಕ್ಷಕ | ಎರಡನೇ ತರಗತಿಯ ಮಕ್ಕಳೊಂದಿಗೆ ಬೆರೆತು ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. | **ಗಣಿತ** **"ಸಂಕಲನ"** | * ಮೊತ್ತವು 99ಕ್ಕೆ ಮೀರದಂತೆ ಒಂದಂಕಿ ಮತ್ತು ಎರಡಂಕಿಯ ಎರಡು ಅಥವಾ ಮೂರು ಸಂಖ್ಯೆಗಳನ್ನು ದಶಕವಿಲ್ಲದ ರೀತಿಯಲ್ಲಿ ಸಂಕಲನ ಮಾಡುವುದು. | ಅಭಿನಯ ಗೀತೆ | ಶಿಕ್ಷಕ | **ಪೂರ್ವ ಸಿದ್ಧತೆ ಚಟುವಟಿಕೆ :** ಶಿಕ್ಷಕರು ಎರಡೂ ತರಗತಿಯ ಮಕ್ಕಳನ್ನು ಒಟ್ಟಿಗೆ ಸೇರಿಸಿ, ಅಭಿನಯ ಗೀತೆ ಮಾಡಿಸುವರು. |
| | 05 ನಿ | | | | ಶಿಕ್ಷಕ | ವಿದ್ಯಾರ್ಥಿಗಳಿಗೆ ದಾಳ ಬಳಸಿ, ಬಂದ ಸಂಖ್ಯೆಗಳನ್ನು ಬರೆದುಕೊಂಡು, ಅವುಗಳನ್ನು ಏರಿಕೆ ಹಾಗೂ ಇಳಿಕೆ ಕ್ರಮದಲ್ಲಿ ಜೋಡಿಸುವಂತೆ ಗುಂಪು ಚಟುವಟಿಕೆ ಮಾಡಿಸಲು ಹಿರೇಮಣಿಗೆ ಸೂಚನೆ ನೀಡುವರು. | | | | ಶಿಕ್ಷಕ | "ಒಂದು ಕಾಗೆ ಬಂದಿತು, ತಿಂಡಿಯನ್ನು ಕಂಡಿತು........." ಚೈತನ್ಯ – 1 ರಲ್ಲಿರುವ ಅಭಿನಯ ಗೀತೆ ಮಾಡಿಸುವರು. |
| | 25 ನಿ | | | | ಹಿರೇಮಣಿ | ಹಿರೇಮಣಿಯ ನೇತೃತ್ವದಲ್ಲಿ ಮೇಲ್ಕಂಡಂತೆ ಮಕ್ಕಳು ಚಟುವಟಿಕೆಯಲ್ಲಿ ತೊಡಗುವರು. | | | ದಪ್ಪಮಣಿ ಗೋಲಿಗಳು<br><br>+ ಚಿಹ್ನೆಯ ಮಿಂಚುಪಟ್ಟಿ | ಶಿಕ್ಷಕ | **ಕಲಿಕಾಂಶ ಚಟುವಟಿಕೆ :** ವಿದ್ಯಾರ್ಥಿಗಳನ್ನು ಒಬ್ಬೊಬ್ಬರಾಗಿ ತರಗತಿಯ ಮುಂಭಾಗಕ್ಕೆ ಕರೆದು ಡಬ್ಬಿಯಲ್ಲಿ ಇರುವ ದಪ್ಪ ಮಣಿ / ಗೋಲಿ ಆಯ್ದು, ಇಬ್ಬರು ತೆಗೆದ ಗೋಲಿ ಸೇರಿಸಿ, ಎಷ್ಟಾಗುತ್ತದೆ ಎಣಿಸಿ ಹೇಳುವಂತಹ ಚಟುವಟಿಕೆ ಮಾಡಿಸುವರು (ಒಂದಂಕಿ ಎರಡಂಕಿ ಸಂಖ್ಯೆ ಮಾತ್ರ)<br>ಸಂಕಲನ ಎಂದರೇನು? ಸಂಕಲನ ಚಿಹ್ನೆ ಹಾಗೂ ಸಂಕಲನ ಮಾಡುವ ಮುನ್ನ ಬರೆದುಕೊಳ್ಳುವ ವಿಧಾನವನ್ನು ಶಿಕ್ಷಕರು ಮಕ್ಕಳಿಗೆ ಪರಿಚಯಿಸುವರು.<br>ನಂತರ ಶಿಕ್ಷಕರು ಗೋಲಿ ಆಯ್ದು, ಎಣಿಸಿ ಸಂಖ್ಯೆಯನ್ನು ಕಪ್ಪುಹಲಗೆ ಮೇಲೆ ಬರೆಯಬೇಕು. ನಂತರ ಇನ್ನೊಬ್ಬ ವಿದ್ಯಾರ್ಥಿ ತಾವು ಆಯ್ದ ಗೋಲಿಯ ಸಂಖ್ಯೆ ಬರೆದು ಎರಡನ್ನೂ ಕೂಡಿ ಮೊತ್ತ ಬರೆಯುವಂತಹ ಚಟುವಟಿಕೆಯನ್ನು ಮಾಡಿಸುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಿ, ಮುಂದುವರಿಸಲು ಹೇಳುವರು. | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಹಿರೇಮಣಿಯ ನೇತೃತ್ವದಲ್ಲಿ ಮುಂದುವರಿಸಲು ಸೂಚನೆ ನೀಡುವರು. |
| | 25 ನಿ | | | | ಶಿಕ್ಷಕ | ಶಿಕ್ಷಕರು ದಾಳದ ಚಟುವಟಿಕೆಯನ್ನು 4 ಜನ ವಿದ್ಯಾರ್ಥಿಗಳನ್ನು ತರಗತಿಯ ಮುಂಭಾಗಕ್ಕೆ ಕರೆದು ಮಾಡಿಸುವರು ಅವರು ತಪ್ಪಿದಲ್ಲಿ ತಿದ್ದಿ ಸೂಕ್ತ ಸಲಹೆ ನೀಡುವರು. | | | | ಹಿರೇಮಣಿ | ಮಕ್ಕಳು ಹಿರೇಮಣಿಯ ನೇತೃತ್ವದಲ್ಲಿ ಚಟುವಟಿಕೆ ಮುಂದುವರೆಸುವರು. |
| | 05 ನಿ | | | | ಶಿಕ್ಷಕ | ತಪ್ಪು ಮಾಡಿದ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಹೆಚ್ಚಿನ ಅಭ್ಯಾಸ ಮಾಡುವಂತೆ ಆದೇಶಿಸುವರು. | | | | ಶಿಕ್ಷಕ | ಮಕ್ಕಳ ಚಟುವಟಿಕೆ ಗಮನಿಸಿ ತಪ್ಪುಗಳನ್ನು ತಿದ್ದಿ ಸೂಕ್ತ ಮಾರ್ಗದರ್ಶನ ನೀಡುವರು. |

**"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".**

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ನಿಗದಿ | ಕಲಿಕಾ ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಕಲಿಕಾ ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3 | 20 ನಿ | ಸ್ವಚ್ಛ ಶೌಚಾಲಯ ಬಳಕೆ ಜಾಗೃತಿ | * ಸ್ವಚ್ಛತೆಯ ಮಹತ್ವ ಅರಿಯುವರು | ಭಜನೆ ಗೀತೆಗಳು | ಶಿಕ್ಷಕ | ಮಕ್ಕಳಿಂದ ಸಾಮೂಹಿಕ ಭಜನೆ ಮಾಡಿಸುವರು. | | | | | ಒಂದನೇ ತರಗತಿಯ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 50 ನಿ | | | | ಶಿಕ್ಷಕ | ತರಗತಿಯ ಮಕ್ಕಳನ್ನು ಸಾಲಿನಲ್ಲಿ ಶಾಲೆಯ ಹೊರಗೆ ಕರೆದುಕೊಂಡು ಬರುವುದು ನಂತರ ಶಾಲಾ ಆವರಣದಲ್ಲಿರುವ ಕಸ-ಕಡ್ಡಿ-ಪೇಪರ್ ಇತ್ಯಾದಿ ತೆಗೆದು ಸ್ವಚ್ಛಗೊಳಿಸುವರು. ನಂತರ ಶೌಚಾಲಯವನ್ನು ಬಳಸುವಾಗ ಅನುಸರಿಸಬೇಕಾದ ಸ್ವಚ್ಛತೆಯ ಕ್ರಮಗಳನ್ನು ಹೇಳಿಕೊಟ್ಟು, ನಿರಂತರವಾಗಿ ಶೌಚಾಲಯವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಮತ್ತು ಬಳಸಬೇಕೆಂಬುದನ್ನು ಶಿಕ್ಷಕರು ಸೂಚಿಸುವರು. | | | | | |
| | 10 ನಿ | | | | ಶಿಕ್ಷಕ | ಸ್ವಚ್ಛತೆಯ ಮಹತ್ವವನ್ನು ಸ್ವಚ್ಛವಾದ ಶಾಲಾ ಆವರಣವನ್ನು ತೋರಿಸುತ್ತಾ ಮನವರಿಕೆ ಮಾಡಿಕೊಡುವರು. ಪ್ರತಿನಿತ್ಯ ಶಾಲಾ ಆವರಣವನ್ನು ಸ್ವಚ್ಛವಾಗಿಡಲು ಕೆಲಸ ಹಂಚಿಕೆ ಮಾಡಿ ಅದನ್ನು ಅನುಸರಿಸಿಕೊಂಡು ಹೋಗಲು ಸೂಚಿಸುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 4 EVS-21 | 10 ನಿ | ಪರಿಸರ ಅಧ್ಯಯನ ನಮ್ಮ ದೇಹ | ದೇಹದ ಮುಖ್ಯ ಭಾಗಗಳನ್ನು ಗುರುತಿಸುವರು | | | **ಸೂಚನೆ :** ಈ ಅವಧಿ ಹಾಗೂ ಮುಂದಿನ ಪರಿಸರ ಅಧ್ಯಯನ ಅವಧಿಗಳಲ್ಲಿ ಒಂದು ಮತ್ತು ಎರಡನೇ ತರಗತಿಯ ಮಕ್ಕಳು ಒಟ್ಟಾಗಿ ಕಲಿಕಾಂಶ ಚಟುವಟಿಕೆಯಲ್ಲಿ ಭಾಗವಹಿಸುತ್ತಾರೆ. | ಪರಿಸರ ಅಧ್ಯಯನ ನಮ್ಮ ದೇಹದ ಭಾಗಗಳು | ದೇಹದ ಹೊರಭಾಗದಲ್ಲಿ ಕಾಣುವ ಅಂಗಗಳನ್ನು ಗುರ್ತಿಸುವುದು ಹಾಗೂ ಅವುಗಳ ಕೆಲಸಗಳನ್ನು ತಿಳಿಯುವುದು. | | | 1ನೇ ತರಗತಿಯಲ್ಲಿರುವ ಚಟುವಟಿಕೆ ಅನ್ವಯವಾಗುತ್ತದೆ. |
| | | | | | ಶಿಕ್ಷಕ | ಹಿಂದಿನ ಅವಧಿಯಲ್ಲಿ ಮಾಡಿಸಿದ ಅಭಿನಯಗೀತೆ ಮತ್ತೊಮ್ಮೆ ಮಾಡಿಸುವರು. | | | | | |
| | 40 ನಿ | | | ದೇಹದ ಭಾಗಗಳ ಚಿತ್ರ ಪಟ | ಶಿಕ್ಷಕ | * ಮಕ್ಕಳನ್ನು ಒಟ್ಟಾಗಿ ಕೂರಿಸಿಕೊಂಡು ಮಾನದ ದೇಹದ ಚಿತ್ರಪಟ ತೂಗು ಹಾಕಿ ದೇಹದ ಹೊರ ಅಂಗಗಳನ್ನು ಪರಿಚಯಿಸುವುದು ಪರಿಚಯಿಸಿದ ಅಂಗಗಳನ್ನು ಮಕ್ಕಳಿಂದ ಹೇಳಿಸುವರು.<br>* ಆಯ್ದ ವಿದ್ಯಾರ್ಥಿಗಳನ್ನು ಕರೆದು ಚಾರ್ಟ್‌ನಲ್ಲಿ ನಿರ್ದಿಷ್ಟ ಭಾಗವನ್ನು ತೋರಿಸಿ ಹೇಳುವಂತೆ ತಿಳಿಸುವರು ಮತ್ತು ಹೇಳಿಸುವರು.<br>* ಒಂದು ಮಗುವನ್ನು ತರಗತಿಯ ಮುಂದೆ ನಿಲ್ಲಿಸಿ ಪ್ರತಿ ಮಗುವೂ ಆ ಮಗುವಿನ ದೇಹದ ಭಾಗಗಳನ್ನು ಗುರುತಿಸಿ ಹೆಸರಿಸುವಂತೆ ತಿಳಿಸಿ ಹೇಳಿಸುವರು. | | | | | 1ನೇ ತರಗತಿ ಚಟುವಟಿಕೆ ಅನ್ವಯಿಸುವರು. |
| | 25 ನಿ | | | | ಶಿಕ್ಷಕ | * ಶಿಕ್ಷಕರು ಗುಂಪಿನಲ್ಲಿ ದೇಹದ ತಲೆಯ ಭಾಗದಲ್ಲಿರುವ ಅಂಗಗಳನ್ನು ಸೂಕ್ತ ಪ್ರಶ್ನೆಗಳನ್ನು ಕೇಳುತ್ತಾ ಮಕ್ಕಳಿಂದ ಉತ್ತರ ಪಡೆದು ಪರಿಚಯಿಸುವರು.<br>* ಮಕ್ಕಳಿಂದ ವೈಯಕ್ತಿಕವಾಗಿ ತಲೆಯ ಭಾಗದಲ್ಲಿರುವ ಅಂಗಗಳನ್ನು ಗುರುತಿಸಿ ಹೇಳಿಸುವರು. | | | | | 1ನೇ ತರಗತಿ ಚಟುವಟಿಕೆ ಅನ್ವಯಿಸುವರು. |
| | 05 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯಲ್ಲಿ ಉತ್ತಮವಾಗಿ ಗುರುತಿಸಿದ ಮಕ್ಕಳನ್ನು ಗುರುತಿಸಿ ಇತರೆ ಮಕ್ಕಳನ್ನು ಪ್ರೋತ್ಸಾಹಿಸಿ ಮುಂದಿನ ಅವಧಿಗೆ ಸಿದ್ಧತೆಯಾಗುವರು. | | | | | |

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಎರಡನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1<br>KAN 35½ | 20 ನಿ | ಕನ್ನಡ<br>ಸಣ್ಣಿ ಮದುವೆ | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗಳು, ಗೀತೆಗಳು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು | ಪ್ರಾಸಗೀತೆಗಳ ಸಂಗ್ರಹ | ಶಿಕ್ಷಕ | ಮಕ್ಕಳು ಎರಡನೇ ತರಗತಿಯ ಚಟುವಟಿಕೆಯಲ್ಲಿ ತೊಡಗುವರು. | ಕನ್ನಡ<br>ಹಾವಿನ ಹಾಡುಗಳು | * ಹಾಡುಗಳು ಮತ್ತು ಪದ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವುದು | ಪ್ರಾಸ ಗೀತೆಗಳು | ಶಿಕ್ಷಕ | **ಪೂರ್ವ ಸಿದ್ಧತೆ ಚಟುವಟಿಕೆ :**<br>ಈ ಹಿಂದೆ ಕಲಿತಿರುವ ಪ್ರಾಸ ಗೀತೆಯನ್ನು ಗುಂಪಿನಲ್ಲಿ ಹೇಳಿಸುವರು.<br>ಉದಾ : ಕೋಗಿಲೆ, ನಾಯಿ ಬಾಲ ಜಗ್ಗಿದ, ಇತ್ಯಾದಿ.<br>* ಮಕ್ಕಳು ಒಂದನೇ ತರಗತಿಯಲ್ಲಿ ಕಲಿತಿರುವ ಹಾಡುಗಳನ್ನು / ಪದ್ಯಗಳನ್ನು ಹೇಳಿಸಲು ಹಿರೇಮಣಿಗೆ ಹೇಳುವರು. ಮಕ್ಕಳು ಒಂಟಿಯಾಗಿ ಹೇಳುವರು. |
| | 30 ನಿ | | | | ಶಿಕ್ಷಕ | **"ಕಲಿಕೆಯ ಚಟುವಟಿಕೆ"**<br>ಹಿಂದಿನ ಅವಧಿಯಲ್ಲಿ ಹೇಳಿದ್ದ "ಗೇರ್ ಗೇರ್ ಮಂಗಣ್ಣ" ಪ್ರಾಸಗೀತೆಯನ್ನು ಗುಂಪಾಗಿ ಹೇಳಿಸುವರು ನಂತರ ಸಣ್ಣೀ ಮದುವೆ ಕವನವನ್ನು ಎಲ್ಲಾ ಮಕ್ಕಳು ಹೇಳಲು ಅನುಕೂಲವಾಗುವಂತೆ ಬಿಡಿಸಿ ಹೇಳಿಕೊಟ್ಟು ಅಭ್ಯಾಸ ಮಾಡಿಸುವುದು. ನಂತರ ಎರಡೆರಡು ಸಾಲುಗಳನ್ನು ಹೇಳಿ ಕೊಟ್ಟು ಹೇಳಿಸುವುದು ಹೀಗೆ ಅಭ್ಯಾಸ ಮಾಡಿಸುವರು. | | | | ಸ್ವಕಲಿಕೆ/ ಹಿರೇಮಣಿ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. |
| | 30 ನಿ | | | | | ಮಕ್ಕಳು "ಸಣ್ಣೀ ಮದುವೆ" ಕವನವನ್ನು ಅಭ್ಯಾಸ ಮಾಡಿಕೊಳ್ಳಲು ತಿಳಿಸುವರು. | | | ಹಾಡುಗಳ ಸಂಗ್ರಹ | ಶಿಕ್ಷಕರು | ಮಕ್ಕಳು ತಾವೇ ಕಲಿತ ಹಾಡುಗಳನ್ನು ಒಂಟಿಯಾಗಿ ಹಾಡಿಸುವರು. (ಯಾವುದೇ ಗೀತೆ ಆಗಬಹುದು). |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| ಅವಧಿ | ಸಮಯ ಹಂಚಿಕೆ | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 2<br>M - 22 | 10 ನಿ | ಗಣಿತ<br>ಏರಿಕೆ ಕ್ರಮ ಮತ್ತು ಇಳಿಕೆ ಕ್ರಮ | * 1 ರಿಂದ 9ರ ವರೆಗಿನ ಸಂಖ್ಯೆಗಳನ್ನು ಏರಿಕೆ ಕ್ರಮ ಮತ್ತು ಇಳಿಕೆ ಕ್ರಮದಲ್ಲಿ ಬರೆಯುವ ಅಭ್ಯಾಸ ಮಾಡುವುದು. | | ಶಿಕ್ಷಕ | ಶಿಕ್ಷಕರು ಮುಂದಿನ ಮೌಲ್ಯಮಾಪನ ಚಟುವಟಿಕೆ ಮಾಡಲು ನೋಟ್ ಪುಸ್ತಕ ಹಾಗೂ ಪಠ್ಯಪುಸ್ತಕ ಮತ್ತು ಪೆನ್ಸಿಲ್ ಸಿದ್ಧಪಡಿಸಿಕೊಳ್ಳಲು ಸೂಚನೆ ನೀಡುವರು. | ಗಣಿತ<br>'ಸಂಕಲನ' | * ಮೊತ್ತವು 99ಕ್ಕೆ ಮೀರದಂತೆ ಒಂದಂಕಿ ಮತ್ತು ಎರಡಂಕಿಯ ಎರಡು ಅಥವಾ ಮೂರು ಸಂಖ್ಯೆಗಳನ್ನು ದಶಕವಿಲ್ಲದ ರೀತಿಯಲ್ಲಿ ಸಂಕಲನ ಮಾಡುವುದು. | | ಶಿಕ್ಷಕ | ಶಿಕ್ಷಕರು ಹಿರೇಮಣಿಯ ನೇತೃತ್ವದಲ್ಲಿ ಪುಟ–69ರಲ್ಲಿನ ಲೆಕ್ಕಗಳನ್ನು ಪುಸ್ತಕದಲ್ಲಿ ಹಾಗೂ ಆಯ್ದ ವಿದ್ಯಾರ್ಥಿಗಳು ಕಪ್ಪು ಹಲಗೆಯ ಮೇಲೆ ಮಾಡುವಂತೆ ಸೂಚನೆ ನೀಡುವರು. |
| | 25 ನಿ | | | ಪಠ್ಯ ಪುಸ್ತಕ,<br>ದಾಳಗಳು,<br>ಕಾರ್ಡ್‌ಗಳು,<br>ಮಿಂಚು ಪಟ್ಟಿಗಳು | ಶಿಕ್ಷಕ | ಶಿಕ್ಷಕರು ಪಠ್ಯಪುಸ್ತಕದ ಪುಟ – 46, 47 ಮತ್ತು 48ರಲ್ಲಿನ ಚಟುವಟಿಕೆ ಬಳಸಿ, ಮೌಲ್ಯಮಾಪನ ಮಾಡುವರು.<br>ಏರಿಕೆ / ಇಳಿಕೆ ಕ್ರಮದಲ್ಲಿ ಜೋಡಿಸುವಾಗ ತಪ್ಪಾಗಿ ಜೋಡಿಸಿದ ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಗೆ ಮತ್ತೊಮ್ಮೆ ಅಭ್ಯಾಸದ ಚಟುವಟಿಕೆ (ಚಿತ್ರಗಳನ್ನು ಬಳಸಿ) ಮಾಡಿಸುವರು. | | | ಪಠ್ಯ ಪುಸ್ತಕ | ಹಿರೇಮಣಿ | ವಿದ್ಯಾರ್ಥಿಗಳು ಮೊದಲು ಪಠ್ಯಪುಸ್ತಕದಲ್ಲಿ ನಂತರ ಆಯ್ದ ವಿದ್ಯಾರ್ಥಿಗಳು ಕಪ್ಪು ಹಲಗೆ / ವಾಲ್‌ಸ್ಲೇಟ್ ಮೇಲೆ ಮಾಡಿ ಉತ್ತರ ಸರಿ ಇದೆಯೇ ಎಂದು ದೃಢೀಕರಿಸಿಕೊಳ್ಳುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಚಟುವಟಿಕೆಯನ್ನು ಪರೀಕ್ಷಿಸಿ ಶಿಕ್ಷಕರು ಮೇಲಿನ ಎಲ್ಲಾ ಚಟುವಟಿಕೆಗಳನ್ನು ನೋಟ್ ಪುಸ್ತಕಗಳಲ್ಲಿ ಬರೆದುಕೊಳ್ಳುವಂತೆ ಸೂಚನೆ ನೀಡುವರು. | | | | ಶಿಕ್ಷಕ | ಮಕ್ಕಳು ಮಾಡಿದ ಲೆಕ್ಕಗಳನ್ನು ಪರಿಶೀಲಿಸಿ ಸೂಕ್ತ ಮಾರ್ಗದರ್ಶನ ನೀಡುವರು. |
| | 25 ನಿ | | | | ಹಿರೇಮಣಿ | ಮಕ್ಕಳು ಬರವಣಿಗೆ ಚಟುವಟಿಕೆಯಲ್ಲಿ ತೊಡಗುವರು. | | | ಪಠ್ಯಪುಸ್ತಕ<br>ಸಂಕಲನ ಲೆಕ್ಕವಿರುವ ಕಾರ್ಡ್‌ಗಳು<br>ದಾಳಗಳು | ಶಿಕ್ಷಕ | ಶಿಕ್ಷಕರು ಸಂಕಲನದ ಅಭ್ಯಾಸವನ್ನು ಹೆಚ್ಚಾಗಿ ಮಾಡಿಸಲು ಪುಟ–70, 71ರಲ್ಲಿನ ಚಟುವಟಿಕೆಗಳಲ್ಲಿನ ಲೆಕ್ಕಗಳನ್ನು ಓದಿ, ವಿವರಿಸಿ, ಲೆಕ್ಕಗಳನ್ನು ಕಪ್ಪುಹಲಗೆಯ ಮೇಲೆ ಮಾಡಿಸುತ್ತಲೇ ನೋಟ್ ಪುಸ್ತಕಗಳಲ್ಲಿ ಬರೆದುಕೊಳ್ಳುವ ಚಟುವಟಿಕೆಯನ್ನು ಮಾಡಿಸುವರು.<br>ಮಕ್ಕಳಿಗೆ ಅವಶ್ಯಕ ಸಲಹೆ ನೀಡುತ್ತಾ ಕೂಡುವಾಗ '+' ಚಿಹ್ನೆ ಹಾಕಲೇಬೇಕೆಂಬುದನ್ನು ಸೂಚಿಸುವರು.<br>ಇತರೆ ಸ್ವತಂತ್ರ ಲೆಕ್ಕಗಳನ್ನೂ ಮಾಡಿಸುವರು. |
| | 10 ನಿ | | | | ಶಿಕ್ಷಕ | ಮಕ್ಕಳ ಬರವಣಿಗೆ ಪರಿಶೀಲಿಸಿ ನೋಟ್ ಪುಸ್ತಕಗಳನ್ನು ತಿದ್ದುವರು. | | | | ಶಿಕ್ಷಕ | ಮಕ್ಕಳ ಲೆಕ್ಕಗಳನ್ನು ಪರಿಶೀಲಿಸಿ, ನೋಟ್ ಪುಸ್ತಕಗಳನ್ನು ತಿದ್ದುವರು. |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ | ಬೋಧನೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ | ಬೋಧನೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 3<br>EVS-22 | | | | | | **ಸೂಚನೆ :** ಒಂದು ಮತ್ತು ಎರಡನೇ ತರಗತಿಯ ಮಕ್ಕಳಿಗೂ ಸಾಮರ್ಥ್ಯ ಅನ್ವಯಿಸುವುದರಿಂದ ಒಟ್ಟಿಗೆ ಕಲಿಕಾಂಶ ಮುಂದುವರೆಸುವರು. | | | | | |
| | 60 ನಿ | ಪರಿಸರ ಅಧ್ಯಯನ ನಮ್ಮ ದೇಹ | ದೇಹದ ಮುಖ್ಯ ಭಾಗಗಳನ್ನು ಗುರುತಿಸುವುದು | ಪಠ್ಯಪುಸ್ತಕ ಕೈಬೆರಳುಗಳಿಂದ ವಿವಿಧ ಕೆಲಸ ಮಾಡುತ್ತಿರುವ ಚಿತ್ರಗಳು<br>"ಕೈ" ಚಿತ್ರ | ಶಿಕ್ಷಕ | ಮಕ್ಕಳನ್ನು ಒಟ್ಟಾಗಿ ಕೂರಿಸಿಕೊಂಡು ಶಿಕ್ಷಕರು ವಿವಿಧ ಕೆಲಸಗಳಲ್ಲಿ ತೊಡಗಿರುವ ಜನರ ಚಿತ್ರಗಳನ್ನು ಪ್ರದರ್ಶಿಸಿ ಅವರು ಏನು ಮಾಡುತ್ತಿದ್ದಾರೆ ?<br>* ಈ ಕೆಲಸಕ್ಕೆ ಅವರು ಉಪಯೋಗಿಸುತ್ತಿರುವ ದೇಹದ ಅಂಗ ಯಾವುದು ? ಇತ್ಯಾದಿ ಪ್ರಶ್ನೆಗಳನ್ನು ಕೇಳುತ್ತಾ ದೇಹದ ಅಂಗಗಳಾದ ಕೈ, ಕಾಲು, ಬೆರಳುಗಳು ಮುಂತಾದವುಗಳಿಂದ ಮಾಡಬಹುದಾದ ಕೆಲಸಗಳನ್ನು ಹೇಳಿಸುತ್ತಾ ಕಪ್ಪು ಹಲಗೆಯ ಮೇಲೆ ಪಟ್ಟಿ ಮಾಡುತ್ತಾ ವಿವಿಧ ಅಂಗಗಳ ಕಾರ್ಯಗಳನ್ನು ತಿಳಿಸಿಕೊಡುವರು.<br>* ಕೈ, ಚಿತ್ರಪಟವನ್ನು ತೋರಿಸಿ ಕೈ ನ ಭಾಗಗಳನ್ನು ಪರಿಚಯಿಸುವರು. ಮಕ್ಕಳಿಂದ ಆ ಭಾಗಗಳನ್ನು ತಮ್ಮ ಕೈಯಲ್ಲಿ ತೋರಿಸುತ್ತಾ ಗುರುತಿಸುತ್ತಾ ಹೆಸರು ಹೇಳಿಸುವರು.<br>* ಕೈ ಬೆರಳುಗಳ ಪರಿಚಯ ಮಾಡಿಕೊಳ್ಳುವರು. ಮಕ್ಕಳಿಂದ ಕೈ ಬೆರಳುಗಳ ಹೆಸರು ಹೇಳಿಸುವರು. | ಪರಿಸರ ಅಧ್ಯಯನ ನಮ್ಮ ದೇಹದ ಭಾಗಗಳು | ನಮ್ಮ ದೇಹದ ಭಾಗಗಳನ್ನು ಗುರುತಿಸುವರು ಮತ್ತು ಅವುಗಳ ಕೆಲಸಗಳನ್ನು ತಿಳಿಯುವರು. | | | |
| | 20 ನಿ | | | ಪಠ್ಯ ಪುಸ್ತಕ | ಶಿಕ್ಷಕ | ಎರಡೂ ತರಗತಿಯ ಮಕ್ಕಳಿಗೆ ದೇಹದ ಭಾಗಗಳ ಪಟ್ಟಿ ಮಾಡಿಕೊಂಡು ಬರಲು ತಿಳಿಸಿ ಅಗತ್ಯ ಸೂಚನೆಗಳನ್ನು ನೀಡಿ ತರಗತಿಯ ಅವಧಿ ಮುಗಿಸುವರು. | | | | | |
| 4 | 20 ನಿ | S.U.P.W.<br>ತೆಂಗಿನ ಗರಿಯಿಂದ ವಿವಿಧ ಆಟಿಕೆ ಮಾಡುವುದು | ಅನುಪಯುಕ್ತ ವಸ್ತು / ಲಭ್ಯವಸ್ತುಗಳಿಂದ ಆಟಿಕೆ ತಯಾರಿಸುವ ಸಾಮರ್ಥ್ಯ ಬೆಳೆಸಿಕೊಳ್ಳುವರು | | ಶಿಕ್ಷಕ | ಎಲ್ಲಾ ಮಕ್ಕಳನ್ನು ಒಟ್ಟುಗೂಡಿಸಿ , ಯಾವುದಾದರೊಂದು ಮನರಂಜನೆಯ ಆಟ ಆಡಿಸುವರು. | | 1ನೇ ತರಗತಿಯಲ್ಲಿ ಅಳವಡಿಸಿರುವ ಸಾಮರ್ಥ್ಯಕ್ಕೆ ಎರಡನೇ ತರಗತಿಯ ಮಕ್ಕಳೂ ಭಾಗವಹಿಸುವರು. | | | |
| | 60 ನಿ | | | ತೆಂಗಿನ ಗರಿ ಮತ್ತು ತೆಂಗಿನ ಕಡ್ಡಿ | ಶಿಕ್ಷಕ | ಮಕ್ಕಳಿಗೆ ಸಂಗ್ರಹಿಸಿತಂದಿರುವ ತೆಂಗಿನ ಗರಿಗಳನ್ನು ವಿತರಿಸಿ ಮಾದರಿಯಾಗಿ ಶಿಕ್ಷಕರು ಮಾಡಿ ತೋರಿಸುವರು. ನಂತರ ಮಕ್ಕಳಿಂದ ಮೊದಲಿಗೆ ಕೈಗೆ ಕಟ್ಟಿಕೊಳ್ಳುವ ಕೈಗಡಿಯಾರವನ್ನು ಮಾಡಿಸುವರು ಅದರ ಮೇಲೆ ಪೆನ್ನಿನ ಸಹಾಯದಿಂದ 1 ರಿಂದ 12ರ ವರೆಗೆ ಸಂಖ್ಯೆಗಳನ್ನು ಬಳಸಿ ಮಕ್ಕಳ ಕೈಗೆ ಕಟ್ಟಿಕೊಳ್ಳುವಂತೆ ತಿಳಿಸುವರು.<br>* ನಂತರ ಮತ್ತೊಂದು ಗರಿಯನ್ನು ವಿತರಿಸಿ ತಿರುಗುವ ಗಾಳಿಪಟವನ್ನು ಮಾಡಿ ತೋರಿಸಿ ನಂತರ ಮಕ್ಕಳ ಕೈಯಿಂದ ಮಾಡಿಸುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".

| | | ಒಂದನೇ ತರಗತಿ | | | | | ಎರಡನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| **1** 36½ KAN | 20 ನಿ | ಕನ್ನಡ ಸಣ್ಣೀ ಮದುವೆ | ಸರಳ ಹಾಗೂ ಬಳಕೆಯಲ್ಲಿರುವ ಜನಪ್ರಿಯ ಪ್ರಾಸಗಳು, ಗೀತೆಗಳು ಮತ್ತು ಕಥೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು. | ಪಠ್ಯ ಪುಸ್ತಕದ ಕವನ | ಶಿಕ್ಷಕರು | "ಸಣ್ಣೀ ಮದುವೆ" ಕವನವನ್ನು ರಾಗ ಬದ್ಧವಾಗಿ ಹೇಳಿಕೊಡುವರು ಮಕ್ಕಳು ಶಿಕ್ಷಕರನ್ನು ಅನುಕರಿಸಿ ಹಾಡುವರು, ಹಾಗೂ ಇದೇ ಹಾಡನ್ನು ಪುನರಾವರ್ತಿಸುವರು.<br>* ತಾವೇ ಹಾಡಿಕೊಂಡು ಅಭ್ಯಾಸ ಮಾಡಿಕೊಳ್ಳಲು ತಿಳಿಸುವರು. | ಕನ್ನಡ ಹಾವಿನ ಹಾಡುಗಳು | ಹಾಡುಗಳು ಮತ್ತು ಸಸ್ಯಗಳನ್ನು ಗುಂಪಿನಲ್ಲಿ ಮತ್ತು ಒಂಟಿಯಾಗಿ ಹಾಡುವುದು | ಹಾವಿನ ಹಾಡು ಕವನ | ಶಿಕ್ಷಕರು | "ಹಾವಿನ ಹಾಡು" ಕವನವನ್ನು ಓದಿಕೊಳ್ಳುವಂತೆ ತಿಳಿಸುವರು. |
| | 40 ನಿ | | | | ಗುಂಪು ಕಲಿಕೆ | ಮೇಲಿನ ಚಟುವಟಿಕೆಯಲ್ಲಿ ತೊಡಗುವರು. | | | ಪಠ್ಯ ಪುಸ್ತಕ | ಶಿಕ್ಷಕ | **ಕಲಿಕಾಂಶ ಹಂತ :**<br>ಹಾವಿನ ಹಾಡು ಪದ್ಯದ 1 ಮತ್ತು 2ನೇ ಚರಣಗಳನ್ನು ಬಿಡಿಬಿಡಿಯಾಗಿ ಮೊದಲು ಗದ್ಯರೂಪದಲ್ಲಿ ಹೇಳಿಕೊಡುವರು. ಪ್ರತಿಸಾಲನ್ನು ದೀರ್ಘವಾಗಿ ಹೇಳಿಕೊಟ್ಟು ಮಕ್ಕಳಿಂದ ಹೇಳಿಸುವರು ನಂತರ ರಾಗವಾಗಿ ಹಾಡಿಸುವರು.<br>* ಮಕ್ಕಳಿಂದ ಒಟ್ಟಾಗಿ ಗುಂಪಿನಲ್ಲಿ ಹಾಡಿಸುವರು ನಂತರ ಅಭ್ಯಾಸ ಮಾಡಿಕೊಳ್ಳಲು ತಿಳಿಸುವರು. |
| | 20 ನಿ | | | | ಶಿಕ್ಷಕ | ಮೇಲಿನ ಚಟುವಟಿಕೆಯನ್ನು ಪರಿಶೀಲಿಸಲು ಪ್ರತಿ ಮಗುವಿನಿಂದ ಪದ್ಯವನ್ನು ಹೇಳಿಸುವರು ಹಾಗೂ ಮಕ್ಕಳ ತಪ್ಪನ್ನು ತಿದ್ದಿ ಹೇಳಿ ಕೊಡುವರು.<br>* ಸರಳ ಪ್ರಶ್ನೆಗಳನ್ನು ಕೇಳಿ ಪದ್ಯವನ್ನು ಅರ್ಥೈಸುವರು. | | | ಪಠ್ಯಪುಸ್ತಕ | ಗುಂಪು ಕಲಿಕೆ | ಮಕ್ಕಳು ಗುಂಪಿನಲ್ಲಿ ಪದ್ಯವನ್ನು ಹಾಡಿಕೊಂಡು ಅಭ್ಯಾಸ ಮಾಡುವರು. |
| **2** | 20 ನಿ | ಜೀವನ ವಿಜ್ಞಾನ "ಭಜನೆ" | * ಮಕ್ಕಳಲ್ಲಿ ಭಜನೆ ಮಾಡಲು ಕುಳಿತುಕೊಳ್ಳುವ ಭಂಗಿ ಹಾಗೂ, ಭಕ್ತಿಗೀತೆಗಳನ್ನು ಹಾಡುವ ಸಾಮರ್ಥ್ಯವನ್ನು ಬೆಳೆಸುವುದು. | ಭಜನಾ ಗೀತೆಗಳು | ಶಿಕ್ಷಕ | ಮೊದಲಿಗೆ ಶಿಕ್ಷಕರು ಎಲ್ಲಾ ವಿದ್ಯಾರ್ಥಿಗಳನ್ನು ಸೂಕ್ತ ದೂರಗಳಲ್ಲಿ ಸೂಕ್ತ ಭಂಗಿಗಳಲ್ಲಿ ವ್ಯವಸ್ಥಿತವಾಗಿ ಕೂರಿಸುವರು. ಕೆಲವು ನಿಮಿಷಗಳು ಮೌನವಾಗಿ ಕಣ್ಣುಮುಚ್ಚಿ ಕೂರುವಂತೆ ಆದೇಶಿಸುವರು. | "ಒಂದನೇ ತರಗತಿಯ ಮಕ್ಕಳೊಂದಿಗೆ ಕೂಡಿ, ಭಜನೆಯಲ್ಲಿ ಪಾಲ್ಗೊಳ್ಳುವರು. | | | | |
| | 50 ನಿ | | | | ಶಿಕ್ಷಕ | ನಂತರ ಶಿಕ್ಷಕ, ತರಗತಿಯ / ವಿದ್ಯಾರ್ಥಿಗಳ ಎದುರು ಸೂಕ್ತ ಭಂಗಿಯಲ್ಲಿ ಕುಳಿತು, ಗಟ್ಟಿಯಾಗಿ ಸ್ಪಷ್ಟವಾಗಿ ಹಾಗೂ ರಾಗವಾಗಿ ಕೆಲವು ಭಜನೆಯ ಗೀತೆಗಳನ್ನು ಹೇಳಿಕೊಡುವರು ಮಕ್ಕಳು. ಶಿಕ್ಷಕರನ್ನು ಅನುಸರಿಸಿ ರಾಗವಾಗಿ ಹೇಳುವರು.<br>"ಜೈ ಜೈ ಜೈ ಜೈ ರಾಮ ನಮೋ<br>ಜೈ ಜೈ ಜೈ ಜೈ ಕೃಷ್ಣನಮೋ..... | | | | | |
| | 10 ನಿ | | | | ಶಿಕ್ಷಕ | ನಂತರ ಶಿಕ್ಷಕರು ಮತ್ತೊಮ್ಮೆ ಮಕ್ಕಳನ್ನು ಕೆಲವು ನಿಮಿಷ ಮೌನವಾಗಿ ಕುಳಿತುಕೊಳ್ಳಲು ಹೇಳಿ, ನಂತರ ತರಗತಿಯನ್ನು 2 ನಿಮಿಷ ವಿಶ್ರಾಂತಿ ಪಡೆಯಲು ಅನುವು ಮಾಡಿಕೊಡುವರು. | | | | | |

"ಶಿಕ್ಷಕರು ಅಗತ್ಯವಿದ್ದಲ್ಲಿ ಅವಧಿಯ ಪ್ರಾರಂಭದಲ್ಲಿ ವಿಷಯಕ್ಕನುಗುಣವಾಗಿ ಪೂರ್ವಸಿದ್ಧತಾ ಚಟುವಟಿಕೆ ಅಳವಡಿಸಿಕೊಳ್ಳುವುದು".